ಅಪರಂಜಿ

ತಿಳಿನಗೆಯ ಕಾರಂಜಿ



ಬೆಳ್ಳಿ ಹಬ್ಬದ ವರ್ಷ

ಏಪ್ರಿಲ್ - 2008





ಚಿಕ್ಕಪ್ಪ ಬೆಂಕಿ ಕಂಡ್ಹಿಡ್ದ, ಭಾಮೈದ ಚಕ್ರ ಕಂಡ್ಹಿಡ್ದ,
ಈಗ ಕಂಡ್ಹಿಡಿಯೋಕ್ಕೆ ನಮ್ಗೆ ಏನೂ ಇಲ್ವಲ್ಲಾ!

ಬಿಡಿ ಪ್ರತಿ: ರೂ.10.00

ಅಪರಂಜಿ

ತಿಳಿನಗೆಯ ಕಾರಂಜಿ





ಸಂಪುಟ 25
ಸಂಚಿಕೆ - 7
ಏಪ್ರಿಲ್ - 2008

ಚಂದಾ ವಿವರ:
ಬಿಡಿ ಪ್ರತಿ: ರೂ. 10/-
ವಾರ್ಷಿಕ ಚಂದಾ: ರೂ. 100/-
ಹತ್ತು ವರ್ಷದ ಚಂದಾ: ರೂ. 750/-
ಕೆಲಸದ ವೇಳೆ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ
ಮುದ್ರಣ: ರವಿ ಗ್ರಾಫಿಕ್ಸ್
ಅಕ್ಷರ ಜೋಡಣೆ:
ಒಮೇಗಾ ಲೇಸರ್ ಟೆಕ್

ಈ ಸಂಚಿಕೆಯಲ್ಲಿ .....

ಪ್ರಕಾಶಕರು: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. email: aparanji@hotmail.com website: aparanjimag.com

ಸಂಪರ್ಕ ವಿಳಾಸ: ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 808-26688488. email: brmurthy@dataone.in



ಂ ಪ್ರಕಾಶ್

ಮೇ ಚುನಾವಣೆಗೆ ಆಯೋಗ್ಯದ ಯತ್ನ – ಶೀರ್ಷಿಕೆ

● 'May' ಅಲ್ಲ ತಾನೆ??

★★★

"ಅಂಗನವಾಡಿ ಊಟ ISCON ಬಾಯಿಗೆ" – ಪತ್ರಿಕೆ

● ಹರೆ ರಾಮ, ಹರೆ ಕೃಷ್ಣ!!

★★★

ಒಂದೇ ಚಿತ್ರದಲ್ಲಿ ಮೂವರು ಮಕ್ಕಳು; ಅಮ್ಮನ ಅಸಮ್ಮತಿ – ಸುದ್ದಿ

● ನಮಗೂ ಅಷ್ಟೆ!!

★★★

ವಕೀಲಿ ವೃತ್ತಿಗೆ ಶ್ರದ್ಧೆ ಅಗತ್ಯ – ಹೇಳಿಕೆ

● ನಮಗೂ ಹಾಗೇ ತೋರುತ್ತದೆ!!

★★★

ರಾಜ್ಯಮಟ್ಟದ ವಾಸ್ತು ಸಮ್ಮೇಳನ – ಸುದ್ದಿ

● ಕಲಾ ಮಂದಿರದ ವಾಸ್ತು ಸರಿ ಇದ್ದರೆ ವಾಸಿ!!

★★★

"ಮಂಗಳ ಗ್ರಹದಲ್ಲಿ ನೀರಿಲ್ಲ"

● ಹಾಗಾದರೆ ಅಲ್ಲೂ ಬೆಂಗಳೂರು ಇರಲೇಬೇಕು!!

★★★

ಹರಭಜನ್‌ಸಿಂಗ್ ಅವರ ಹೆಸರನ್ನು 'ಭಜ್ಜಿ'ಯಿಂದ ಜಾಮೂನ್ ಅಂತ ಮಾಡುತ್ತಾರೆ ಎಂಬುದು ಶುದ್ಧ ಕುಹಕ!!

★★★

ಮೈಸೂರು ಸ್ಯಾಂಡಲ್‌ನಿಂದ ಮತ್ತಷ್ಟು ಸಾಬೂನು – ಸುದ್ದಿ


● ಸ್ಕ್ಯಾಂಡಲ್ ಆಗದಿದ್ದರೆ ಉತ್ತಮ!!

★★★

ಚಿನ್ನ ಮತ್ತೆ ತುಟ್ಟಿ; ಒಂದು ಗ್ರಾಂಗೆ 1275 ರೂ. – ವಾಣಿಜ್ಯ ಸುದ್ದಿ

● ಇದರಿಂದ ನಮಗಂತೂ ಎಳ್ಳಷ್ಟೂ ಭಯವಿಲ್ಲ!!

★★★



ನನ್ನ ದೃಷ್ಟಿಯಲ್ಲಿ ಉತ್ತಮ ಹಾಸ್ಯಸಾಹಿತ್ಯ

- ಕು.ಗೋ.

ಡಾ|| ಜಾನಕಿ ಸುಂದರೇಶ್ ವೃತ್ತಿಯಲ್ಲಿ ಪಶುವೈದ್ಯೆ. ಬಾಲ್ಯದಿಂದಲೂ ಅಂಟಿಕೊಂಡ ಪ್ರವೃತ್ತಿ ಬರಹ. ದೊಡ್ಡ ಕುಟುಂಬದ ಸದಸ್ಯೆಯಾದುದರಿಂದ ಜೀವನದಲ್ಲಿ ಬೇಕಾದಷ್ಟು ಅನುಭವ ಪಡೆದು ಈ ಅನುಭವಗಳನ್ನೆಲ್ಲ ತಮ್ಮ ಬರಹಗಳಲ್ಲಿ ಹೊರಗೆಡಹಿದ್ದಾರೆ. ಗ್ರಾಮಾಂತರ ಹಾಗೂ ನಗರ ಜೀವನದ ಅನುಭವಗಳನ್ನು ತಮ್ಮ ಸಾಹಿತ್ಯದಲ್ಲಿ ಉಪಯೋಗಿಸಿಕೊಂಡಿದ್ದಾರೆ. ಒಳ್ಳೆಯ ಹಾಸ್ಯ ಪ್ರಜ್ಞೆಯನ್ನು ಬೆಳೆಸಿಕೊಂಡಿರುವ ಜಾನಕಿಯವರಿಂದ ಈಗಾಗಲೇ ಚಿಂತನ ಬರಹಗಳು, ಕಾದಂಬರಿಗಳು, ಕಥಾ ಸಂಕಲನಗಳು, ಲಲಿತ ಪ್ರಬಂಧಗಳು, ಮನೋವೈಜ್ಞಾನಿಕ ಬರಹಗಳು ಹೊರಬಂದಿವೆ. ಆದರೂ ಇವರ ಹಾಸ್ಯ ಬರಹಗಳು ಮಿಂಚಿದ್ದೇ ಹೆಚ್ಚು. ಸುನಂದಮ್ಮ, ಭುವನೇಶ್ವರಿ ಹೆಗಡೆಯವರ ಸಾಲಿಗೆ ಸೇರಿಸಬಹುದಾದ ಹಾಸ್ಯ ಲೇಖಕಿ ಡಾ|| ಜಾನಕಿ ಸುಂದರೇಶ್.

ಗೌರಿ, ಮದ್ದಾನೆಗಳು, ಅನಿಚ್ಛ, ಹುಚ್ಚು ಹುಡುಗರು, ತ್ರಿವಿಕ್ರಮ ಇನ್ ಮಾಡರ್ನ್ ಟೈಮ್, ದೆವ್ವಗಳ ಭಾವ್ಯಲೋಕ ನಾಳೆ ನಮ್ಮದು, ನೀವು ಚೆನ್ನಾಗಿ ಆಲೋಚಿಸಬಲ್ಲಿರಾ, ಕೌಟುಂಬಿಕ ಸಾಮರಸ್ಯ ಸಾಧಿಸಿ ಇವು ಜಾನಕಿಯವರ ಪ್ರಕಟಿತ ಕೃತಿಗಳು. ಅನೇಕ ಪ್ರಶಸ್ತಿಗಳೂ ಇವರ ವಶವಾಗಿವೆ. ಸರಳ ಶೈಲಿ, ನವಿರಾದ ಹಾಸ್ಯ, ಮಿತವಾದ ವಿಡಂಬನೆ, ಪದಗಳ ಲಾಸ್ಯ – ಒಟ್ಟಾರೆ ಓದಿಸಿಕೊಂಡು ಹೋಗುವ ಒಳ್ಳೆಯ ಗುಣ ಇವರ ಬರಹಗಳ ಧನಾಂಶ. 'ಎಲ್ಲಾ ನೋಡುವವರಿಗಾಗಿ' ಅಪರಂಜಿ ಓದುಗರಿಗಾಗಿ ಆರಿಸಿದ್ದೇನೆ. ಇಷ್ಟವಾದರೆ 'ದೆವ್ವಗಳ ಭವ್ಯಲೋಕದ ಎಲ್ಲ ಬರಹಗಳನ್ನು ಓದಿ.

ಎಲ್ಲಾ ನೋಡುವವರಿಗಾಗಿ

- ಜಾನಕಿ ಸುಂದರೇಶ್

ಅವಳು ಒಂದಿಷ್ಟೂ ಅಲುಗಾಡದೆ ಸ್ಥಿರವಾಗಿ ಒಂದೇ ಭಂಗಿಯಲ್ಲಿ ಕುಳಿತಿದ್ದಳು. ಗ್ರಾಮೀಣ ಪ್ರದೇಶದ ಹಸಿರಿನ ತೊಟ್ಟಿಲಲ್ಲಿ ಮಲಗಿದ್ದ ಏಕಾಂಗಿ ಬಸ್ ಷೆಲ್ಟರ್ ಅದು. ಕೆಂಪು ಸಿಮೆಂಟ್ ಕಟ್ಟೆಯ ಮೇಲೆ ಇಟ್ಟಿಗೆ ಬಣ್ಣದ ಚೂಡಿದಾರ ಧರಿಸಿಕೊಂಡು, ಮಡಿಲಲ್ಲಿದ್ದ ಕಪ್ಪು ವ್ಯಾನಿಟಿ ಬ್ಯಾಗನ್ನು ಆಸರೆಗೊ ಎಂಬಂತೆ ಬಿಗಿಯಾಗಿ ಅವಚಿಕೊಂಡಿದ್ದಳು. ಕುತ್ತಿಗೆಯನ್ನು ನೆಟ್ಟಗೆ ನಿಟರಾಗಿಸಿ, ಕಣ್ಣೋಟವನ್ನು ನೆಲಕ್ಕಿಳಿಸಿ ಹೆಚ್ಚೂ ಕಡಿಮೆ ಕೂತಲ್ಲೇ ನಿದ್ರಿಸಿದ್ದಾಳೇನೋ ಎನಿಸುವಂತೆ ನಿಶ್ಚಲವಾಗಿದ್ದಳು. ಅವಳು ಹೆಣ್ಣಲ್ಲದಿರುತ್ತಿದ್ದರೆ, ಹದಿಹರೆಯದವಳಲ್ಲದಿರುತ್ತಿದ್ದರೆ, ಮುಖದಲ್ಲಿ ಒಂದು ನಿಷ್ಪಾಪಿ ಅಬೋಧಕತೆಯಿರದಿರುತ್ತಿದ್ದರೆ, ನೋಡಿದವರಿಗೆ ಅವಳು ಮಾದಕ ದ್ರವ್ಯದ ಮತ್ತಿನಲ್ಲಿದ್ದಾಳೇನೋ ಎಂದು ಅನುಮಾನ ಬರಬೇಕು ಹಾಗಿತ್ತು ಅವಳು ಕೂತ ಭಂಗಿ. ಅವಳೇಕೆ ತಲೆ ಎತ್ತಿ ನೋಡುವುದಿಲ್ಲ? ಕೊನೇಪಕ್ಷ ಕಣ್ಣೆವೆಗಳನ್ನಾದರೂ ಕದಲಿಸಿ ಒಂದು ಹಿಂಜರಿಕೆಯ ಕುಡಿನೋಟ ಬೀರುವುದಿಲ್ಲ? ವಿಗ್ರಹದಂತೆ ಕೂತಿದ್ದಾಳಲ್ಲ, ಹೀಗೆ ಕೂತಿರುವಂತಾದ್ದು ಅವಳಿಗೇನಾಗಿರಬಹುದು? ಸಹಿಸಲಾರದಷ್ಟು ದುಃಖವನ್ನು ಎದೆಯಲ್ಲಿ, ತಾಳಲಾರದ ಚಿಂತೆಯನ್ನು ತಲೆಯಲ್ಲಿ ತುಂಬಿಕೊಂಡು ಅದರ ಭಾರಕ್ಕೆ ಹೀಗೆ ಜಗ್ಗಿ ಕುಸಿದು ಕೂತಿದ್ದಾಳೆಯೇ? ಮನೆಯಲ್ಲಿ ಮಲತಾಯಿ ತಂಗಳನ್ನ ತಂದು ಸುರಿದು ಹಂಗಿಸಿ ಮಾತಾಡುತ್ತಾಳೇಯೇ? ಎತ್ತಿ ಬಾಯಿಗಿಟ್ಟ ತುತ್ತಿನ ಲೆಕ್ಕ ಹಿಡಿದು ಖರ್ಚು ಜಾಸ್ತಿಯಾಯ್ತೆಂದು ಗೊಣಗುತ್ತಾಳೆಯೇ? ವಾರವಿಡೀ ಬೆನ್ನು ಬಗ್ಗಿಸಿ ಕೂತು, ಬೀಡಿ ಕಟ್ಟಿ ಕಾಸಿಗೆ ಕಾಸು ಗಂಟುಹಾಕಿ, ಬೆಳ್ಳಿ ಕಾಲ್ಗೆಜ್ಜೆಗೆಂದು ಇಟ್ಟುಕೊಂಡಿದ್ದ ದುಡ್ಡನ್ನು ಅಪ್ಪನೆನಿಸಿಕೊಂಡವನು ಬಡಿದು ಕಿತ್ತುಕೊಂಡನೇ? ಯಾರಿಗೆ ಗೊತ್ತು. ಒಳಗೆ ಏನೇನು ನೋವುಗಳಿವೆಯೋ. ಒಂದಿನಿತೂ ಗೀರು ಗೆರೆಯಿಲ್ಲದಂತೆ ಇಸ್ತ್ರಿ ತಿಕ್ಕಿ ಮೇಲ್ಮೈ ಸಪಾಟಾದಂತೆ ಕಾಣುವ ನೀರಿನ ಆಳದಲ್ಲಿ ಅದೆಷ್ಟು ಕೆಸರುಂಟೋ ಏನೇನು ಕ್ರಿಮಿಕೀಟಗಳಿವೆಯೋ! ವಿನಾಕಾರಣ ಆ ಹುಡುಗಿಯ ಬಗ್ಗೆ ಅಯ್ಯೋ ಪಾಪ ಎನಿಸಿತು.

ನಾನಿದ್ದ ಬಸ್ಸು ಅಲ್ಲಿ ನಿಂತಿದ್ದು ಎರಡೇ ಎರಡು ನಿಮಿಷ. ಇಳಿಯುವವರು ಇಳಿದಾಯ್ತು. ಅವರನ್ನು ತಳ್ಳಿಕೊಂಡು ಹತ್ತುವವರು ಹತ್ತಿಯಾಯ್ತು. ಡ್ರೈವರಣ್ಣ ವಂಯಕ, ವಂಯಕ ಎಂದು ಹಾರ್ನ್ ಬಾರಿಸಿ, ಕಂಡಕ್ಟರು ರೈಟ್ ರಾಗ ಹಾಡಿಯಾಯ್ತು, ನಾನು ಅವಳನ್ನೇ ಗಮನಿಸುತ್ತಿದ್ದೆ. ಬಸ್ಸು ಗಡರ್ ಎಂದು ಗೇರು ಬದಲಿಸಿ ಹೊರಟಿದ್ದೇ ತಡ ಶಿಲಾಬಾಲಿಕೆಯಲ್ಲಿ ಜೀವ ಸಂಚಾರಾಯ್ತು. ತಟಕ್ಕನೆ ಸ್ವಿಚ್ಚು ಒತ್ತಿದರೋ ಎಂಬಂತೆ ಕಣ್ರೆಪ್ಪೆಗಳು ಮೇಲೆದ್ದು ದೃಷ್ಟಿ ಒಂದು ಗಳಿಗೆ ಬಸ್ಸಿನತ್ತ ಹೊರಳಿ, ಮತ್ತೆ ಏನೋ ತಪ್ಪು ಮಾಡಿದಂತೆ ಕೆಳಗಿಳಿದು ವ್ಯಾನಿಟಿ

ಬ್ಯಾಗಿನ ಮೇಲೆ ಸ್ಥಿರವಾಯ್ತು. ಭುಜಗಳು ಸ್ವಲ್ಪ ತಗ್ಗಿ ಬೆನ್ನು ಬಗ್ಗಿತು. ಓಹೋ ಇದು ಕೆಟ್ಟ ಮಲತಾಯಿಯ, ಕುಡುಕ ತಂದೆಯ ಕೇಸಲ್ಲ. ಕರಗಿಹೋದ ಕನಸಿನ ಕೇಸೂ ಅಲ್ಲ. ಇದು ಶುದ್ಧಕ್ಕೆ ಶುದ್ಧ 'ಎಲ್ರೂ ನೋಡ್ತಾರೆ'. ಸಿಂಡ್ರೋಮು. ಬಂದು ನಿಂತ ಬಸ್ಸಿನಲ್ಲಿರುವ ಅಷ್ಟೂ ಜೊತೆ ಕಣ್ಣುಗಳು ತನ್ನ ಮೇಲಿವೆಯೆಂಬ ಅನಿಸಿಕೆಯ (ಭ್ರಮೆಯ?) ಭಾರಕ್ಕೆ ಅವಳು ಸಂಕೋಚದಿಂದ ಹಿಡಿಯಾಗಿ ದೃಷ್ಟಿ ಕೆಳಗಿಳಿಸಿ ಕೂತಿದ್ದಾಳೆ. ಎಲ್ಲರೂ ನನ್ನನ್ನೇ ನೋಡ್ತಿದ್ದಾರಲ್ಲ, ಏನು ಮಾಡಲಿ. ಹೇಗೆ ಕೂರಲಿ, ಕೈಕಾಲುಗಳನ್ನು ಹೇಗಿಟ್ಟುಕೊಳ್ಳಲಿ. ಕುತ್ತಿಗೆ ತಗ್ಗಿಸಲೇ, ಬೆನ್ನು ಬಗ್ಗಿಸಲೆ ಎಂದೆಲ್ಲ ತಲೆಕೆಡಿಸಿಕೊಂಡು ಸಿಕ್ಕಾಪಟ್ಟೆ Self-concious ಆಗಿ, ಅಲುಗಾಡದೆ ಕಟ್ಟಿ ಹಾಕಿದಂತೆ ಕೂತಿದ್ದಾಳೆ! ಅಯ್ಯೋ ಹುಡುಗೀ, ನಿನ್ನ ಕಥೆಯೇ!!

ಆ ವಯಸ್ಸಿನ ಹುಡುಗಿಯರೇ ಹಾಗೆ. ಹೊರಗೆ ಹೊರಟಾಗಲೆಲ್ಲ ಅವರಿವರ ಕಣ್ಣಿನ ನೋಟದ್ದೇ ಚಿಂತೆ. ರಸ್ತೆಯಲ್ಲಿ ನಡೆಯಲು ಕಷ್ಟ ಅಂಗಡಿಯಲ್ಲಿ ಮಾತನಾಡಲು ಕಷ್ಟ ಸ್ಕೂಲಿನಲ್ಲಿ, ಕಾಲೇಜಿನಲ್ಲಿ, ಸ್ಟಾಫ್ ರೂಮಿನೊಳಗೆ ಹೋಗಲು ಕಷ್ಟ ಗೆಳತಿಯರ ಜೊತೆ ಮಾರ್ಕೆಟ್ಟಲ್ಲಿ ಹೋಗುವಾಗ ನಗದೇ ಮಾತನಾಡಲು ಕಷ್ಟ ಸ್ವಲ್ಪ ಸ್ಪೆಷಲ್ ಆಗಿ ಡ್ರೆಸ್ ಹಾಕಿಕೊಂಡು ಅಲಂಕಾರ ಮಾಡಿಕೊಂಡಿದ್ದರಂತೂ ಕಷ್ಟವೋ ಕಷ್ಟ ಅವರ ಫಜೀತಿ ಚೆನ್ನಾಗಿ ನೋಡಬೇಕಾದರೆ ಮದುವೆ ಮನೆಗಳಿಗೆ ಹೋಗಬೇಕು.

ಮದುವೆಯ ದಿನ ಬಾತ್‌ರೂಮಿನ ಎದುರು ನೂಕುನುಗ್ಗಲು ನೋಡಬೇಕು. ಇವತ್ತು ಬಿಟ್ಟರೆ ಇನ್ನೆಂದೂ ಸ್ನಾನಕ್ಕೆ ಚಾನ್ಸೇ ಇಲ್ಲವೆಂಬಂತೆ ಇವತ್ತಿನ ದಿನ ಸ್ನಾನ ಮಾಡದಿದ್ದರೆ ಏನೋ ಆಗಬಾರದ್ದು ಆಗಿ ಹೋಗುವುದೆಂಬಂತೆ, ಮುಹೂರ್ತದ ಹೊತ್ತಿಗೆ ಸ್ನಾನ ಮಾಡಿ ತಯಾರಾಗಿರದಿದ್ದರೆ ಗಡೀಪಾರು ಶಿಕ್ಷೆಯಿದೆಯೇನೋ ಎಂಬಂತೆ ಸ್ನಾನದ ಮನೆಯ ಎದುರು ಮುಕುರಿಕೊಂಡು ಕ್ಯೂ ನಿಂತಿರುತ್ತಾರೆ. ನಿಂದಾದ ಮೇಲೆ ನಾನು ಎಂದು ಟವೆಲನ್ನು ಒಳಗಿಟ್ಟು ಬಿಕ್ ಮಾಡಿ ನಿಮಗೇನ್ರೇ ಅಷ್ಟು ಅರ್ಜೆಂಟು ಎಂದು ಹಿರಿಯ ಹೆಂಗಸರಿಂದ ಜಬರಿಸಿಕೊಂಡಾಯ್ತು. ಹರಿದ ಶಾಂಪೂ ಪ್ಯಾಕೇಟ್, ನೊರೆ ತುಂಬಿದ ನೀರು ನೀರು ನೆಲ, ಉದುರಿದ ಕೂದಲ ರಾಶಿಯಿಂದ ತೂಬು ಕಟ್ಟಿಹೋದ ಬಚ್ಚಲಲ್ಲಿ ಗಡಿಬಿಡಿಯಿಂದ ಸ್ನಾನ ಮಾಡಿ ಹುಡುಗಿ, ಹೊರ ಬಂದಿದ್ದಾಯ್ತು, ಬೀಗರ ಕೋಣೆಯಲ್ಲಿ ಸೂಟ್‌ಕೇಸೂ, ಹೂವಿನ ಬುಟ್ಟಿ ಲಾಡು ಪ್ಯಾಕೇಟ್, ತೆಂಗಿನಕಾಯಿ ಮೂಟೆಗಳ ಮಧ್ಯೆ ಒತ್ತಡಿಸಿ ಎರಡು ಕಾಲಿಡುವಷ್ಟು ಜಾತಿ ಮಾಡಿಕೊಂಡು ಸ್ಟಿಕ್ಕರ್ ಬಿಂದಿಯ ಗಂ ತುಂಬಿಕೊಂಡ ಕಪ್ಪುಗಟ್ಟಿದ ಕನ್ನಡಿಯ ಚೌಕ್ಟದೊಳಗೆ ಕಿಸಕಿಸಿ ನಗುವ ಮುಖ ತೂರಿ ಅಲಂಕಾರ ಮಾಡಿಕೊಂಡಿದ್ದಾಯ್ತು. ಆಚೆ ಈಚೆ ಇದ್ದವರ ಕಣ್ಣಿಗೆ ಬಾಯಿಗೆ ಬಾಚಣಿಕೆ ತಾಗಿಸಿ ಬೈಸಿಕೊಳ್ಳುತ್ತಾ ಕಟ್ಟಿದ ತ್ರೀರಿಂಗ್ ತುರುಬನ್ನೋ ಕಟ್ಟಿಕೊಂಡು, ಅದರ ಮೇಲೆ ಗುಂಡುಸೂಜಿಗೆ ಚುಚ್ಚಿದ ಬಣ್ಣದ ಮಣಿಗಳ ಅಲಂಕಾರ ಮಾಡಿಕೊಂಡು, ಅಮ್ಮ ಕೊಟ್ಟ ಮಲ್ಲಿಗೆ ಹೂವನ್ನು 'ಥೂ ಈ ಹೇರ್‌ಸ್ಟೈಲಿಗೆ ಹೂವು ಸೂಟ್ ಆಗಲ್ಲ ಕಣಮ್ಮ' ಎಂದು ರಿಜೆಕ್ಟ್ ಮಾಡಿಯಾಯ್ತು. ಇನ್ನು ಮುಂದಿನ ಹೆಜ್ಜೆ ಸ್ವಲ್ಪ ತಲೆ ಬಿಸಿಯ

ಬಾಬತ್ತು. ಸೀರೆ ಉಡುವುದು! ಮೈ ಗಾಡ್! ಹೇಗಪ್ಪಾ! "ಅಯ್ಯೋ ನಂಗೆ ಉಟ್ಕೊಳ್ಳೋಕೆ ಬರೋಲ್ಲ ಕಣೇ ಅಭ್ಯಾಸಾನೇ ಇಲ್ಲ, ಆಂಟೀ ಪ್ಲೀಸ್ ಸ್ವಲ್ಪ ಸೀರೆ ಉಡಿಸ್ತೀರಾ?"

ಸೀರೆ ಉಡಿಸಲು ಆಂಟಿಯರೇ ಸರಿ. ಅಮ್ಮಂದಿರಲ್ಲ! ಅಮ್ಮಂದಿರಿಗೆ ಆವತ್ತು ಘನವಾದ ಕೆಲಸಗಳಿರುತ್ತವೆ. ಕಲಶ ಕನ್ನಡಿ, ಅನುಕೂಲದ ತಟ್ಟೆ ಅಕ್ಷತೆ ಅರಿಶಿನ ಕುಂಕುಮ. ಸಕ್ಕರೆ ಹಿಟ್ಟು ಇತ್ಯಾದಿ ಜವಾಬ್ದಾರಿಗಳಿರುತ್ತವೆ. ಹಾಗಾಗಿ ಕೈಗೆ ಸಿಕ್ಕಿದ ಒಂದಿಬ್ಬರು ಆಂಟಿಯರ ಎದುರು ಹುಡುಗಿಯರೆಲ್ಲ ಕ್ಯೂ ನಿಂತು ಉಡಿಸಿಕೊಳ್ಳಬೇಕು. ಲೇಟಾಗುತ್ತದಲ್ಲ ಎನ್ನುವ ಟೆನ್‌ಶನ್ ಲೇಟಾಗುವುದು ಯಾವುದಕ್ಕೆಂದು ಗೊತ್ತಿಲ್ಲದಿದ್ದರೂ! ಆ ಆಂಟಿ ಸೆರಗು ಮಡಚಿ ಎದೆಯ ಮೇಲಿಂದ ತಂದು ಪಿನ್ ಹಾಕುವಾಗ, ನೆರಿಗೆ ಹಿಡಿದು ಸೊಂಟಕ್ಕೆ ಸಿಕ್ಕಿಸುವಾಗ ಕಚಗುಳಿಯೆನಿಸಿ ಪುಟಿದು ಬರುವ ನಗುವಿನ ಕಾಟ ಬೇರೆ. ಹಾಗೂ ಹೀಗೂ ಅಲಂಕಾರ ಮುಗಿಸಿಕೊಂಡು, ತಗಡಿನಂತಹ ಕನ್ನಡಿಯಲ್ಲಿ ಮತ್ತೊಮ್ಮೆ ಮುಖ ನೋಡಿಕೊಂಡು 'ಸರಿ ಇದೆಯೇನೇ' ಎಂದು ಸಮವಯಸ್ಕಳನ್ನು ಕೇಳಿ ತಾನು ಎಂದಿಗಿಂತಲೂ ಸುಂದರಿಯಾಗಿ ಕಾಣುತ್ತಿರುವೆನೆನ್ನುವ ತೃಪ್ತಿಯೊಂದಿಗೆ ಕೋಣೆಯ ಹೊಸಿಲು ದಾಟಿ ಹೊರಗಿಟ್ಟ ಹೆಜ್ಜೆ ಒಂದು ಘಳಿಗೆ ಅಲ್ಲೇ ತಡೆದುಬಿಡುತ್ತದೆ. ಅಯ್ಯಯ್ಯಪ್ಪಾ ಇಡೀ ಮದುವೆ ಮನೆಯ ಜನರೆಲ್ಲ ನನ್ನನ್ನೇ ನೋಡ್ತಿದ್ದಾರೆ. ಹೇಗಪ್ಪಾ ಹೋಗಲಿ? ಅಭ್ಯಾಸವಿಲ್ಲದ ಸೀರೆ ಕಾಲಿಗೆ ತೊಡರಿ ಮುಗ್ಗರಿಸಿದರೆ? ಮುಗ್ಗರಿಸಿದ್ದನ್ನು ಹಿಂದಿನ ಸಾಲಲ್ಲಿ ಕೂತು ಹರಟೆ ಕೊಚ್ಚುತ್ತಾ ನಗುತ್ತಿರುವ ಪಡ್ಡೆ ಹುಡುಗರ ಗುಂಪು ನೋಡಿಬಿಟ್ಟರೆ? ಸಂಕೋಚಪಡುತ್ತಾ, ಹಿಂಜರಿಯುತ್ತಾ ಲಿಪ್‌ಸ್ಟಿಕ್ ಹಚ್ಚಿದ್ದರಿಂದ ಬಿಗಿದಂತಾಗುತ್ತಿರುವ ಕೆಂಪು ತುಟಿಗಳ ಮೇಲೆ ಅರಳುವ ನಗುವನ್ನು ಅದುಮಿಟ್ಟು ಕಣ್ಣುಗಳು ಖಾಲಿ ಕುರ್ಚಿಯನ್ನು ಹುಡುಕುತ್ತವೆ. ಕೋಣೆಯ ಹೊಸ್ತಿಲಿನಿಂದ ನಾಲ್ಕನೇ ಸಾಲಿನ ಎರಡನೇ ಕುರ್ಚಿಯ ತನಕ ಇರುವ ಹನ್ನೆರಡು ಹೆಜ್ಜೆಗಳ ದೂರ ಹನ್ನೆರಡು ಯೋಜನೆಗಳಂತೆ ತೋರುತ್ತದೆ. ತಲೆ ಬಗ್ಗಿಸಿ ಒಂದು ಕೈಯಲ್ಲಿ ನೀರಿಗೆ ಇನ್ನೊಂದು ಕೈಯಲ್ಲಿ ಉಂಡೆಗಟ್ಟಿದ ಕರ್ಚೀಫು ಹಿಡಿದು ನೂರಾರು ಕಣ್ಣುಗಳ ನೋಟಕ್ಕೆ ಹೆದರು ನೆಲ ನೋಡುತ್ತಾ ಹೋಗಿ ಕೂತ ಮೇಲೆ ಒಂದು ಬಗೆಯ ಅನುಮಾನ ಮನದೊಳಗೆ ಮಿನುಗುತ್ತದೆ. ನಡೆದು ಬರುತ್ತಿದ್ದಾಗ ಆ ಹುಡುಗರ ಗುಂಪು ನನ್ನನ್ನು ನೋಡಿತೆ? ಅಥವಾ ನೋಡಲೇ ಇಲ್ಲವೇ? ಡ್ರೆಸ್ ಮಾಡಿಕೊಂಡು ಚೆನ್ನಾಗಿ ಕಾಣುತ್ತಿದ್ದೆನಲ್ಲ! ನೋಡಿದ್ದರೆ ಸಾಕಪ್ಪಾ ದೇವ್ರೇ.

ಕುತ್ತಿಗೆಯನ್ನು ಸ್ವಲ್ಪ ತಿರುಗಿಸಿ ಕಳ್ಳಗಣ್ಣಿಂದ ಹಿಂದೆ ನೋಡಿದಾಗ ಹುಡುಗರ ನೋಟ ತನ್ನ ಮೇಲಿದೆಯೆಂದಾದರೆ ಸಮಾಧಾನಗೊಂಡು ಪಕ್ಕದವಳ ಮಾತಿಗೆ ಉತ್ತರವಾಗಿ ಹೊಮ್ಮಿಸಿದ, ನಗುವಿನ ವಾಲ್ಯೂಂ ಸ್ವಲ್ಪ ಜಾಸ್ತಿಯಿರುತ್ತದೆ. ಇಲ್ಲದಿದ್ದರೆ ಬೇಕೋ ಬೇಡವೋ ಎನ್ನುವಂತೆ ಥಂಡಿ ಹಿಡಿದ ನಿತ್ರಾಣೀ ನಗು ಮಳೆಗಾಲದ ಒದ್ದೆ ಸೂರ್ಯನಂತೆ ಮೈತಾಳುತ್ತದೆ. ಏನೇನು ಫಜೀತಿ ಅವರಿವರು ನೋಡುತ್ತಾರೆಂದು, ನೋಡಲಿ ಎಂದು ನೋಡಲಿಲ್ಲವಲ್ಲ ಎಂದು, ಸಧ್ಯ ನೋಡಿದರಲ್ಲಾ ಎಂದು!


ಇಲ್ಲಿ ಹೀಗಾದರೆ, ಅಲ್ಲಿ ಜೋಕುಗಳ ಹುಡಿ ಹಾರಿಸುತ್ತಿರುವ ಪಡ್ಡೆ ಹುಡುಗರ ಗುಂಪಲ್ಲೂ ಪರಿಸ್ಥಿತಿ ಭಿನ್ನವಾಗೇನೂ ಇಲ್ಲ. ನೋಡುಗರ ನೋಟದ ಕಡೆಗಿನ ಒಂದು ಯೋಚನೆ ಸ್ಥಾಯಿಯಾಗಿದ್ದೇ ಇದೆ. ಎತ್ತರದ ದನಿಯಲ್ಲಿ ತನ್ನ ಲೆಕ್ಚರರನ್ನೋ ಯಾವನೋ ಪುಡಾರಿಯನ್ನೋ ಅನುಕರಿಸುತ್ತಾ ಸುತ್ತಲಿನವರನ್ನು ನಗಿಸುತ್ತಿರುವ ಹುಡುಗನ ಮನಸ್ಸಲ್ಲಿ ಇವರೆಲ್ಲ ನನ್ನನ್ನೇ ನೋಡುತ್ತಿದ್ದಾರೆನ್ನುವ ಆತ್ಮವಿಶ್ವಾಸ ಬೆರೆತ ತೃಪ್ತಿ. ಬರೀ ನೋಡುವುದಷ್ಟೇ ಅಲ್ಲ, ಕೇಳುತ್ತಲೂ ಇದ್ದಾರೆ. ಕೇಳು ನಕ್ಕು "ಎಗ್ಸಾಕ್ಟ್‌ಲೀ ಬಾಸ್, ಲಾಲೂ ಹೀಗೆ ಮಾತಾಡೋದು" ಎಂದು ಅಪ್ರೂವಲ್ ಕೊಡುತ್ತಿದ್ದಾರೆ. ಮುಂದಿನ ಸಾಲಿನಲ್ಲಿರುವ ಹಿರಿಯ ತಲೆಗಳು ಈ ಹುಡುಗರ ಅಣುಕಾಟ ಕಿಸಿದಾಟವನ್ನು ಸ್ವಲ್ಪ ಅಸಹನೆಯಿಂದ ತಿರುಗಿ ನೋಡುತ್ತಿದ್ದಾರೆ ನಿಜ. ಆದರೆ ಅವನೇನೂ ಅದಕ್ಕೆಲ್ಲಾ ಕೇರ್ ಮಾಡುವ ಜನ ಅಲ್ಲ. ಈ ದೊಡ್ಡವರೆನ್ನಿಸಿಕೊಳ್ಳುವ ಓಲ್ಡ್ ಮಾಡೆಲ್‌ಗಳ 'ಹಳೆ ಪುರಾಣ'ಗಳನ್ನು ಧಿಕ್ಕರಿಸುವ ಸಮೃದ್ಧ ಅಚ್ಚ ಕೆಂಪಿನ ಹೊಚ್ಚ ಹೊಸ ರಕ್ತ ಅವನ ಮೈಯ ಧುಮುಗುಟ್ಟಿಕೊಂಡು ಹರಿಯುತ್ತಿದೆ. ಹಾಗಾಗಿ ದೊಡ್ಡವರ ನೋಟದ ಬಗ್ಗೆ, ಆಕ್ಷೇಪಣೆಗಳ ಬಗ್ಗೆ ಅವನು 'ಲೀಸ್ಟ್ ಬಾದರ್ಡ್" ಅಂದರೆ ಆ ಹುಡುಗಿ ಬಹುಶಃ ಬೀಗರ ಕಡೆಯವಳಿರಬೇಕು ಗೋಣಿ ತಟ್ಟಿನಂಥ ರೇಷ್ಮೆ ಸೀರೆ ಉಟ್ಟುಕೊಂಡು, ತಲೆಯ ತುಂಬಾ ಸಿಲ್ಲಿಯಾಗಿ ಪ್ಲಾಸ್ಟಿಕ್ ಮಣಿಗಳನ್ನು ಇಟ್ಟುಕೊಂಡಿದ್ದರೂ ಒಂಥರಾ ಚೆನ್ನಾಗಿದ್ದಾಳೆ. ಒಂದು ಆ್ಯಂಗಲ್‌ನಲ್ಲಿ ರಾಣಿ ಮುಖರ್ಜಿ ಥರ ಕಾಣಿಸುತ್ತಾಳೆ. ಅವಳು ನನ್ನನ್ನು ನೋಡಿದಳೇ? ನಾನೆಂಥಾ ಹೀರೋ ಎನ್ನುವುದನ್ನು ಗಮನಿಸಿದಳೇ ಅಣ್ಣನ ರೂಮಿಂದ ಹೇಳದೇ ಕೇಳದೆ ಎಗರಿಸಿ ತಂದ ಮೊಟ್ಟೆಯಾಕಾರದ ಕಪ್ಪು ಕನ್ನಡಕ ಜೇಬಲ್ಲಿದೆ ಅದನ್ನು ಹಾಕಿಕೊಂಡು ಸ್ವಲ್ಪ ರಾಹುಲ್ ದ್ರಾವಿಡ್ ಥರ ಕಾಣ್ತೀಯಾ ಅಂತ ಫ್ರೆಂಡ್ಸ್ ಹೇಳ್ತಾರೆಂತ ತೆಗೆದು ಮೂಗಿಗೇರಿಸಿಕೊಳ್ಳಬೇಕೆಂದು ಕೈ ತುರಿಸುತ್ತದೆ. ಆದರೆ ಹಾಲ್‌ನ ಒಳಗಡೆ ಹಾಕಿಕೊಂಡ್ರೆ ಸಿಲ್ಲಿಯಾಗಿರುತ್ತಲ್ಲ!

ಅಂತೂ ಇಂತೂ ನೋಡುವವರ ಕಣ್ಣು ತಪ್ಪಿಸಿ ಅದ್ಯಾವುದೋ ಒಂದು ರಸಘಳಿಗೆಯಲ್ಲಿ ರಾಣಿ ಮುಖರ್ಜಿ ಮತ್ತು ಆ ರಾಹುಲ್ ದ್ರಾವಿಡ್ ಕಣ್ನೋಟಗಳು ಸಂಧಿಸುವುದು ವಿಧಿ ಬರೆದ ಕಥೆ. ಸುಳಿ ಮಿಂಚಿನ ವಿದ್ಯುದಾವೇಗಕ್ಕೆ ಮೋಡ ಕರಗಿ ನೀರಾಗಿ ನದಿಯಲ್ಲಿ ನೆರೆ ಉಕ್ಕಿದಂತೆ, ನೋಟಗಳ ಮುಲಾಕಾತ್‌ನೊಂದಿಗೆ ಹರಿದಾಡಿದ ಕಾಂತಿಯ ಅಲೆಗಳ ಪ್ರಖರತೆಗೆ ಹಿಂಜರಿಕೆ ಕೀಳರಿಮೆ, ಭಯ, ಸ್ಟಂಟು, ಬಿಂಕ ಇತ್ಯಾದಿಗಳು ಸಿಕ್ಕಾಪಟ್ಟೆ ಕಂಡಾಪಟ್ಟೆ ಮೂಡಿ ಉಬ್ಬರ ಏರಿಸಿಬಿಡುತ್ತವೆ. ಹಾಗೆ ಏರಿ ಬಂದ ಉಬ್ಬರದ ಅಬ್ಬರದಲ್ಲಿಬ್ಬರೂ ಮುಳುಗೇಳತೊಡಗುತ್ತಾರೆ. ಒಂದು ಬಗೆಯ ದೃಷ್ಟಿದೋಷ ಪ್ರಾರಂಭವಾಗಿ ಅವಳ ಮುಖದ ಮೇಲಿನ ಮೊಡವೆಯನ್ನು, ಅವನ ಲವ್‌ಲೆಟರ್ ಬರೆಯುತ್ತೇನೆಂದು ಶುರುಮಾಡಿ ಇಂಗ್ಲೀಷ್ ವ್ಯಾಕರಣವನ್ನು ದಾರುಣವಾಗಿ ಹರಿಸಿ ಮಾಡಿದ ರೀತಿಯನ್ನು ಪರಸ್ಪರ ನಿಶ್ಶರ್ತವಾಗಿ ಕ್ಷಮಿಸಿಕೊಂಡು ಬಿಡುತ್ತಾರೆ. ಆಮೇಲೆ ರಾಜರಾಣಿ ಎಲ್ಲರೂ ಸುಖವಾಗಿದ್ದರೇ? ಇಲ್ಲ ಇಲ್ಲ, ನೋಡುವವರ ನೋಟದ ಗುಮ್ಮನ ಕಾಟ ಇದ್ದೇ ಇದೆಯೇ?

''ಯಾರಾದ್ರೂ ನೋಡ್ತಾರೆ ಬೇಡ ಹೋಗೋಣ'' ಅವಳ ಪಿರಿ ಪಿರಿ. ಇವನಿಗೆ ಕಿರಿಕಿರಿ.

''ಥತ್ತೇರಿ! ಎಂತಾ ಜನ ಮಾರಾಯಾ! ನೋಡುವವರಿಗೆ ಇಷ್ಟೆಲ್ಲ ಹೆದರುವ ಈ ರಾಣಿ ಮೂಕಜ್ಜಿಯನ್ನು ಏನಪ್ಪಾ ಮಾಡಲಿ?'' ಎಂದು ತಲೆ ಬಿಸಿಯಾಗುತ್ತದೆ. ಆದೂ ಅವರ ನಡುವಿನ ಕೆಮಿಕಲ್ ರಿಯಾಕ್ಷನ್‌ಗಳು ನಿರಂತರ ನಡೆದು ಕೊನೆಗೆ ದೊಡ್ಡವರು / ಪೋಲೀಸರು / ಸಬ್‌ರಿಜಿಸ್ಟ್ರಾರ್ ಮಾಡಬೇಕಾದದ್ದು ಮಾಡಿ ಫಿಸಿಕಲ್ ರಿಯಾಕ್ಷನ್‌ಗಳಿಗೆ ರಹದಾರಿ ಕಲ್ಪಿಸಿಕೊಡುತ್ತಾರೆ. ಅಲ್ಲಿ 'ಎಲ್ಲರೂ ನೋಡ್ತಾರೆ' ಸಿಂಡ್ರೋಮು ಮುಗಿದು ಹೋಯ್ತು ಎಂದು ತಿಳಿದುಕೊಂಡರೆ ಶುದ್ಧ ತಪ್ಪು ಈಗ ಅದು ರೂಪಾಂತರಗೊಂಡು ''ಎಲ್ಲರೂ ನೋಡಲಿ ಸಿಂಡ್ರೋಮು'' ಆಗಿರುತ್ತದೆ!

ಹನಿಮೂನಿಗೆಂದು ಹೊರಟಾಗ ಬಸ್ಸಲ್ಲಿ ಅವನು ಅವಳ ಹೆಗಲ ಸುತ್ತ ಕೈ ಬಳಸಿ ಕೂತ ''ಬೇರಾರಿಗೂ ಇದು ಇಲ್ಲೆಂದಾ....'' ಹೊರಟನು ಕಸ್ತೂರಿ ಬಸ್ಸಿನಲ್ಲಿ ಜಂಭದ ಕೋಳಿಯ....?



ನಮ್ಮ ನಿಮ್ಮಲ್ಲಿ

ಇದೇ ವರ್ಷ ಅಕ್ಟೋಬರ್ ತಿಂಗಳ ಹೊತ್ತಿಗೆ ಅಪರಂಜಿಗೆ ಇಪ್ಪತ್ತೈದು ತುಂಬಿ ಇಪ್ಪತ್ತಾರಕ್ಕೆ ಕಾಲಿಡುತ್ತಾಳೆ. ಕಳೆದ ಅಕ್ಟೋಬರ್‌ನಿಂದ ಮುಂದಿನ ಅಕ್ಟೋಬರ್‌ವರೆಗೆ ಅಪರಂಜಿಯ ಮಟ್ಟಿಗೆ ಬೆಳ್ಳಿಯ ಹಬ್ಬದ ವರ್ಷ. ಈ ಒಂದು ವರ್ಷದಲ್ಲಿ ಅಪರಂಜಿಯ ಬೆಳ್ಳಿಯ ಹಬ್ಬದ ಸಂಭ್ರಮವನ್ನು ನಾಡಿನ ಇತರ ಭಾಗಗಳಲ್ಲೂ ಹಂಚಿಕೊಳ್ಳುವ ಯೋಚನೆ ಮೂಡಿದಾಗ ಅತಿ ಉತ್ಸಾಹದಿಂದ ನಮ್ಮ ನೆರವಿಗೆ ಇಬ್ಬರು ಮಹನೀಯರು ಮುಂದೆ ಬಂದರು. ಉಡುಪಿಯ ಶ್ರೀ ಗೋಪಾಲಭಟ್ಟರು ತಮ್ಮ ಸುಹಾಸ ಸಂಸ್ಥೆಯ ಸಹಯೋಗದೊಂದಿಗೆ ಉಡುಪಿಯಲ್ಲಿ ಹಾಸ್ಯ ಸಂಜೆಯೊಂದನ್ನು ನಡೆಸಿಕೊಡಿರೆಂದು ನಮಗೆ ಆಮಂತ್ರಣ ನೀಡಿದರು. ಏಪ್ರಿಲ್ 26ರಂದು ಸಂಜೆ ಈ ಕಾರ್ಯಕ್ರಮವನ್ನು ಉಡುಪಿಯ ಕಿದಿಯೂರು ಹೋಟೆಲಿನ ಸಭಾಂಗಣದಲ್ಲಿ ನಡೆಸಲು ನಿರ್ಧರಿಸಿದ್ದೇವೆ. ಭಾರತೀಯ ವಿದ್ಯಾಭವನದ ಅಧ್ಯಕ್ಷರಾದ ಶ್ರೀ ರಾಮಾನುಜರವರು ಜೂನ್ 22ರಂದು ಮೈಸೂರಿನಲ್ಲಿ ಹಾಸ್ಯ ಸಂಭ್ರಮ ನಡೆಸಲು ತಮ್ಮ ಸಂಸ್ಥೆಯ ಮುಕ್ತ ಸಹಕಾರವನ್ನು ನಮಗೆ ನೀಡಿದ್ದಾರೆ. ಈ ಸಮಾರಂಭ ಮೈಸೂರಿನ ಜಗನ್ಮೋಹನ ಸಭಾಂಗಣದಲ್ಲಿ ನಡೆಯಲಿದೆ. ಈ ಎರಡೂ ಕಾರ್ಯಕ್ರಮಗಳಿಗೆ ನಿಮ್ಮೆಲ್ಲರಿಗೂ ಆದರದ ಸ್ವಾಗತ.

ಕಳೆದ ತಿಂಗಳಿಗೆ ಶರಲೇಖನ ಸಾಹಸಗಳು ಪ್ರಾರಂಭವಾಗಿ ಒಂದು ವರ್ಷವಾಯಿತು. ಈ ಒಂದು ವರ್ಷದಲ್ಲಿ ಶರಲೇಖನ ಸಾಹಸಗಳ ಬಗ್ಗೆ ವತ್ಸನ ವರದಿಗಳು ಓದುಗರನ್ನು ತಕ್ಕಮಟ್ಟಿಗೆ ರಂಜಿಸಿರಬಹುದೆಂದು ಭಾವಿಸಿದ್ದೇನೆ. ಈ ಕುರಿತು ನಿಮ್ಮ ಮುಕ್ತ ಅನಿಸಿಕೆಗಳಿಗೆ ಅವಕಾಶ ನೀಡುವ ಉದ್ದೇಶದಿಂದ ಈ ಮಿತ್ರದ್ವಯರು ಸದ್ಯಕ್ಕೆ ರಜೆಯಲ್ಲಿ ಹೋಗಿದ್ದಾರೆ. ನಿಮ್ಮ ಫೀಡ್‌ಬ್ಯಾಕ್ ಹಾಗೆ ಸೂಚಿಸಿದರೆ ಮತ್ತೆ ವತ್ಸನ ವರದಿಗಳನ್ನು ಮುಂದುವರಿಸಬಹುದು.

ಓದುಗರ ಭಾಗವಹಿಸುವಿಕೆಗೆ ಪ್ರಚೋದನೆ, ನಮ್ಮ ಹೊಸ ಅಂಕಣ ಕಾಫಿ ಹೌಸ್ ನ ಮೂಲ ಉದ್ದೇಶ. ದಿನಬೆಳಗಾದರೆ ನಿರಾಶಾದಾಯಕ ಸುದ್ದಿಗಳೇ ಪತ್ರಿಕೆಗಳಲ್ಲಿ ತುಂಬಿರುವ ಈ ದಿನಗಳಲ್ಲಿ ಆಶಾದಾಯಕ ಸುದ್ದಿ ತುಣುಕುಗಳನ್ನು ಗುರುತಿಸಿ ಬೆಳಕುಗಾಣಿಸುವ ಅಂಕಣ ಇದು. ಪ್ರಾರಂಭದಲ್ಲಿ ನಮ್ಮ ಸಂಪಾದಕ ವರ್ಗದವರಿಂದ ಈ ಅಂಕಣದ ಕೆಲಸ ಸಾಗಿದ್ದರೂ ಕಾಲ ಸಾಗಿದಂತೆ ಹೆಚ್ಚು ಹೆಚ್ಚು ಓದುಗರು ಈ ಅಂಕಣಕ್ಕೆ ಬರೆಯಲು ತಮ್ಮ ಒಲವನ್ನು ತೋರಲೆಂದು ನಮ್ಮ ಆಶಯ.

- ಶಿವಕುಮಾರ್

ಪಡುಕೋಣೆ ರಮಾನಂದರಾವ್ ಸ್ಮಾರಕ ಹಾಸ್ಯ ಲೇಖನ ಸ್ಪರ್ಧೆಯಲ್ಲಿ
ತೀರ್ಪುಗಾರರ ಮೆಚ್ಚುಗೆ ಪಡೆದ ಲೇಖನ

ನಮ್ದೇನೈತೆ ಸಾ? - ಯೆಲ್ಲಾ ಅವನ್ದೇ

- ಮಣಿ

"ನಮಸ್ಕಾರ ಸಾ,"

"ನಮಸ್ಕಾರ ತಮ್ಮಣ್ಣ - ಚೆನ್ನಾಗಿದ್ದೀಯಾ?"

"ಯೇನೋ ಯಿಸ್ವರ ಮಟ್ಗೆ ಸಾ - ಗಾಡಿಯಿನ್ನೂ ರನ್ನಿಂಗ್ ಕಂಡೀಸನ್ನಾಗೈತೆ. ಯಾವಾಗ ಕುಂಟೈತೋ - ಯೇನೋ! ಯಾವೋನಿಗ್ಗೊತ್ತು ಸಾ? ನಮ್ ನಾಯಕ್ರ ಬುದ್ದಿಯಿದ್ದಂಗೆ - ಯಾವ ಮಿನಿಟ್ನಾಗಾದ್ರೂ ರಿವರ್ಸ್ ವೊಡೀಬೋದು. ಯಾವ ಟೈಂನಾಗೇನೋ ಯಾರಿಗೆ ತಿಳೀತೈತೆ? ವೂಟ ಮಾಡ್ದೋನು ಲೋಟದಾಗಿನ ನೀರು ಕುಡಿಯೋದು ಗ್ಯಾರಂಟಿಯಿಲ್ಲ - ನಿದ್ದೆ ಮಾಡ್ದೋನು ಯೆದ್ದು ಕುಂತ್ಕೊಳ್ಳೋದು ಗ್ಯಾರಂಟಿಯಿಲ್ಲ - ಯೇಳೋನ್ಗೆ ಬೀಳೋದು ತಿಳಿ ಯಾಕಿಲ್ಲ - ನಡೆಯೋನ್ಗೆ ಯೆಡವೋದು ತಿಳಿಯಾಕಿಲ್ಲ."

"ನಿಜ"

"ಪಾಪ! ಆ ಸೀನಪ್ನೋರ ಕೇಸು ನೋಡಿದ್ರಾ ಸಾ - ಯೇನಾಯ್ತು?"

"ಯಾರು? - ಆಮೂಲೆ ಮನೆ - ಸೀಬೆಗಿಡದ ಮನೆ ಸೀನಪ್ನೋರು?"

"ಔದು"

"ಬಹಳ ಒಳ್ಳೇವ್ರು - ಪಾಪ! ಏನಾಯ್ತು?"

"ಅಯ್ಯೋ - ಯಾಕೇಳ್ತೀರ? ಪಾಪ! ಯಿನ್ನೂ ಚಿಕ್ವಯ್ಸು - ಮೂವತ್ಮೂರೂ ಮುಗ್ದಿಲ್ಲ - ಯಿಬ್ರು ಪುಟ್ಟ ಮಕ್ಳು. ಯೆಂಗಿದ್ರು? ವೊಳ್ಳೆ ಗುಂಡ್ಕಲ್ಲಿದ್ದಂಗಿದ್ರು. ಮೊನ್ನೆ ಸುಕ್ರವಾರ ರಾತ್ರಿಯೆಂಡ್ತಿ ಮಕ್ಳ ಜೊತೆಯಾಗೆ ನಗ್‌ನಗ್ತಾ ವೂಟ ಮಾಡವ್ರೆ - ಟೀ.ವಿ. ನೋಡವ್ರೆ - ಮಲಗೋಕ್ಮುಂಚೆ ಆಲುಕುಡುದವ್ರೆ - ಬಾಳೆ ಅಣ್ಣು ತಿಂದವ್ರೆ - ಮಕ್ಳ ಜೊತೆಯಾಗೆ ಬ್ರೆಡ್ಡು ತಿಂದವ್ರೆ - ಮಲಗವ್ರೆ - ಅಷ್ಟೇ. ಬ್ರೆಡ್ಡು ತಿಂದು ಮಲಗ್ದೋರು - ಬೆಳಿಗ್ಗೆ ಬೆಡ್‌ನಿಂದ ಯೇಳ್ಲೇಯಿಲ್ಲ - ಡೆಡ್ - ಆಗವ್ರೆ."

"ಛೇ - ಪಾಪ! ನೋಡಿದ್ಯಾ ತಮ್ಮಣ್ಣ? - ದೈವ ಸಂಕಲ್ಪ - ದೊಡ್ಡ ರಹಸ್ಯ. ಇದರ ಜೊತೆಗೆ ಕಷ್ಟಕಾರ್ಪಣ್ಯಗಳು - ರೋಗ ರುಜಿನಗಳು - ಒಂದೇ? - ಎರಡೇ?"

"ಯಿಂಗಿದ್ರೂ ಮನುಸ್ಯನಿಗೆ ಯೇನಾರಾ ಅರ್ತವಾಗೈತಾ ಸಾ? -

ಯಿವ್ನಯೆಗ್ರೋದೇನು? – ನಿಗ್ರೋದೇನು? ಆಡ್ಬಾರ್ದುದ್ ಆಡೋದು – ಮಾಡ್ಬಾರ್ದುದ್ ಮಾಡೋದು – ತಲೆತುಂಬ ಕೆಟ್ಟಯೋಚ್ನೆ – ಕೆಟ್ಟಬುದ್ಧಿ – ಸರೀರದ ತುಂಬ ಯಿಸ. ಅಲ್ಲಾ ಸಾ – ಗಾಡೀಗೆ ಪ್ಯೂರ್ ಪೆಟ್ರೋಲು ಆಕಿದ್ರಲ್ವಾ ಅದು ಆಯಾಗಿ ವೋಡೋದು – ಬಾಳ್ಕೆಬರೋದು? ಕಲಬೆರ್ಕೆ ಪೆಟ್ರೋಲ್ ಆಕಿದ್ರೆ? ವೊಗೆ ತುಂಬ್ಕೊಳ್ಳೈತೆ – ಸರಿಯಾಗಿ ವೋಡೋದೂಯಿಲ್ಲ – ವೊಂದಿನ ಯೆಂಜಿನ್ನೂ ಡಮಾರ್ ಅಂತೈತೆ – ಅಲ್ವಾ ಸಾ? ಗಾಡಿ ಅಂಗೆ ನಮ್ ಬಾಡೀನೂ ಸಾ. ಗಾಡೀಗೆ ಸುದ್ದವಾದ ಪೆಟ್ರೋಲ್ ಬೇಕು ಬಾಡೀಗೆ ಸುದ್ದವಾದ ಯೋಚ್ನೆ – ಬುದ್ದಿಬೇಕು. ಆಗ್ಲೇ ಬಾಡೀನೂ ಚೆಂದಾಗಿರೋದು – ಬಾಳ್ಕೆ ಬರೋದು.''

''ಕರೆಕ್ಟಾಗಿ ಹೇಳಿದೆ ತಮ್ಮಣ್ಣ. ಸದ್ಬುದ್ಧಿ – ಸದ್ ಯೋಚನೆ – ಸನ್ಮಾರ್ಗ – ಸನ್ನಡತೆ – ಸದಾಚಾರ – ಸಂಪನ್ನತೆ – ಒಟ್ನಲ್ಲಿ ಆ ಸಂಸ್ಕೃತಿ – ಸಂಸ್ಕಾರ – ಇವೆಲ್ಲಾ ಎಲ್ಲಿವೆ ತಮ್ಮಣ್ಣ? ಇನ್ನು ಸತ್ಯ–ಧರ್ಮ–ನ್ಯಾಯ–ಇವು ಎಲ್ಲಿವೆಯೋ – ಹೇಗಿವೆಯೋ ಆದೇವರಿಗೇ ಗೊತ್ತಾಗ್ಬೇಕು!''

''ಅಯ್ಯೋ ಸಿವ್ನೆ – ಅವೆಲ್ಲಾ ಅರಿಕತೆಯಾಗವೆ – ನಿಜಕತೆಯಾಗಿಲ್ಲವೆ ಸಾ? ಅವೆಲ್ಲಾ ನಿಮ್ಕಾಲ್ಕೇ ವೊಂಟೋದ್ವು – ಅಲ್ಲಾ ಸಾ – ಬಗ್ವಂತ ಯಿಸ್ಟು ಮಡಗಿದ್ದೂ ಮನುಸ್ಯಯಿಂಗವ್ನಲ್ಲಾ – ಯಿನ್ನು ಯೆಲ್ಲಾ ಮೊದ್ಲೇ ತಿಳಿದ್ಬುಟ್ಟು – ಸಲೀಸಾಗೂ ಯಿದ್ಬುಟ್ಟಿದ್ರೆ – ಯೆಂಗಿರ್ತಿದ್ದಾ ಸಾ?''

''ರಾಮಾಯಣ, ಮಹಾಭಾರತಗಳ ರಾಕ್ಷಸರ ಹಾಗೆ ಇರ್ತಿದ್ದ.''

''ಗುಡಿಯಿಂದ್ಲೇ ದೇವರ್ನ ವೋಡಿಸ್ಬುಟ್ಟು ಆಜಾಗ್ದಾಗೆ ನಿಂತ್ಬುಡ್ತಿದ್ದ'' ಯೀಗ ಯಿವ್ನಯಾವ ರಾಕ್ಸನಿಗೆ ಯೇನು ಕಡಿಮೆ ಅವ್ನೆ ಸಾ?''

''ಅದೂ ನಿಜಾನ್ನು – 'ನಾನು' ಅನ್ನೋ 'ಅಹಂ' – ದುರಹಂಕಾರ – ಕಾಮಕ್ರೋಧಗಳು – ರಾಗ ದ್ವೇಷಗಳು – ಎಲ್ಲಾ ರಾಕ್ಷಸ ಗುಣಗಳೂ ಶರೀರದ ತುಂಬ ತುಂಬಿವೆ.''

''ಅದು ಬುಡಿ – ಬಂಕ್ನಾಗೆ ಪೆಟ್ರೋಲ್ ಯಿದ್ದಂಗೆ ಸರೀರದ ತುಂಬ ಐತೆ. ಅದ್ರಿಂದ ಯೇನೂ ಪ್ರಯೋಜ್ನಯಿಲ್ಲಾ ಸಾ – ಅವೆಲ್ಲಾ ಬ್ರಾಂತು – ನಮ್ತಾವ ಯೇನೈತೇ ಸಾ? ಬರೇ ಅಂಕಾರ – ಅಸ್ಟೇ. ಯೆಲ್ಲಾ ಅವನ್ತಾವ ಐತೆ. ಮುಕ್ಯ ನಮ್ ಸರೀರದ ರಿಮೋಟೇ ಅವನ್ತಾವೈತೆ. ವೊಂದು ಬಟನ್ನು ಅಲ್ಲಿ ವೊತ್ತಿದ್ರೆ ಸಾಕು – ಯಿಲ್ಲಿ ಯೀಗಾಡಿ ಬ್ರೇಕ್ ಡೌನು. ಬಸ್ಸು–ಕಾರು–ಅಂತಾ ಗಾಡಿಗಳ್ನ ಅರಾಜಾಕಿದ್ರೆ ನಾಲ್ಕು ಕಾಸಾದ್ರೂ ಬರ್ತೈತೆ – ಯೀಗಾಡೀಗೇನೈತೆ ಸಾ ವ್ಯಾಲ್ಯೂ? ಯಿಲ್ಸನ್ ಗಾರ್ಡನ್ಗೆ ಸಾಗಿಸ್ಬೇಕು – ಅಸ್ಟೇ.''

''ನಿಜ ತಮ್ಮಣ್ಣ''

''ನಮ್ ಲೈಪು – ಚಾರ್ ಮುಡಿ ಗಾಟ್ಸಿದ್ದಂಗೆ ಸಾ – ಸುತ್ಲೂ ಪಾರೆಸ್ಟು – ಮದ್ಯದಾಗೆ ರೋಡು – ಸುತ್ಕೊಂಡುಸುತ್ಕೊಂಡು – ನಾಗರಾವಿನಂಗೆ. ಅಪ್ಪು–ಡೌನು– ವೊಳ್ಳೆ ಟಾರು ರೋಡು – ಯಿದ್ಕಿದ್ದಂಗೆ ಡ್ಯಾಮೇಜು ರೋಡು – ಜಲ್ಲಿ ಯೆದ್ದಿರ್ತೈತೆ – ಮಣ್ಣು ಬಿದ್ದಿರ್ತೈತೆ – ನೀರು ನಿಂತಿರ್ತೈತೆ – ಮತ್ತೆ ಸಲೀಸು – ಮತ್ತೆ ತಕ್ಲೀಪುಯಿಂಗೆ. ಯಿದ್ರಜೊತೇಗೆ ಕರ್ವ್ಸ

– ಟರ್ನಿಂಗ್ಸು – ಅದ್ರಾಗೂ ಸಿಂಗಲ್ ಕರ್‌ವ್ಸು–ಡಬ್ಬಲ್ ಕರ್‌ವ್ಸು – ಯೇರ್‌ಪಿನ್‌ಕರ್‌ವ್ಸು – ಮತ್ತೆ ಡೇಂಜರ್ ಜೋನ್ಸು–ಆಕ್ಸಿಡೆಂಟ್ ಜೋನ್ಸು–ಡೆತ್ ಜೋನ್ಸು – ಯೆಸ್ಟವೆ ಸಾ? ಮಧ್ಯದಾಗೆ ಕಾಡು ಪ್ರಾಣಿಗ್ಳು ಅಡ್ಡ ಬಂದ್ರೂ ಬರ್ಬೋದು'' ಮೈತುಂಬ ಕಣ್ ಮಡಕ್ಕೊಂಡು – ವುಸಾರಾಗಿ ಡ್ರೈವ್ ಮಾಡಿದ್ರೋ ವೂರು – ಯಿಲ್ದಿದ್ರೆ ನೀರು. ಅಂಕಾರ ಪಟ್ಕೊಂಡು ಸ್ವಲ್ಪ ಅತ್ತಯಿತ್ತ ತಿರುಗಿದ್ರೂ ಸಾವಿರಡಿ ಅಳ್ಳ. ಗಾಡಿವುರುಳೋದು – ನರಳೋದು ಯಿಲ್ಲ ಪರಲೋಕಕ್ಕೆ ವೊರಡೋದು–ಯೇನಂತೀರಾ ಸಾ?''

''ಖಂಡಿತ–ಸತ್ಯ–ತಮ್ಮಣ್ಣ''

''ಅದ್ಕೇ – ನಮ್ ಯಿರಿಯರು ಯೇಳಿರೋದು – ಜೀವನ್ದಾಗೆ ದೇವ್ರು ದಿಂಡ್ರು–ದೊಡ್ಡೋರು ಚಿಕ್ಕೋರು–ಬಯಬಕ್ತಿ–ನೀತಿ ನಿಯಮ ಮಡಕ್ಕೊಂಡು – ಮೈಮರೀದೆ ವೋದ್ರೋ ಟ್ರಾವಲಿಂಗು ಜಾಲಿ–ಯಿಲ್ದಿದ್ರೆ ಪಜೀತಿ.''

''ಸತ್ಯವಾದ ಮಾತು ತಮ್ಮಣ್ಣ. ಜೀವನವನ್ನು ಎಷ್ಟು ಸೊಗಸಾಗಿ ಅನಲೈಸ್ ಮಾಡಿದ್ದೀಯ! – ವಂಡರ್‌ಫುಲ್!''

''ಅಯ್ಯೋ ಅಸ್ಟು ದೊಡ್ಮಾತ್ಯಾಕೆ ಬುಡಿ ಸಾ– ನಾನು ಯೆಸ್ಟರ ಮಟ್ಟಿನೋನು. ನನ್ಗೇನು ಯಿದ್ಯೇನಾ? – ಬುದ್ದೀನಾ? – ಯೇನೋ ನಿಮ್ಮಂತಾವ್ರ ಅತ್ತಿರ ಕಲ್ತಿದ್ದು – ನನ್ಗೆ ತಿಳ್ದಂಗೆ ನಾಲ್ಕು ಮಾತಾಡ್ದೆ – ಅಸ್ಟೇ.''

''ತಮ್ಮಣ್ಣಾ – ಆ ತಿಳಿದಿರೋದು ಅನ್ನೋದೆ ಅನುಭವ – ಜ್ಞಾನ. ಇಷ್ಟಕ್ಕೂ ಈಗ ಮೂರು ನಾಲಕ್ಕು ಡಿಗ್ರಿ ಇರೋರು– ಮಹಾಜ್ಞಾನಿಗಳು–ಬುದ್ಧಿಜೀವಿಗಳು ಅನ್ನಿಸ್ಕೊಂಡಿರೋರು ಏನುಮಾಡ್ತಾ ಇದ್ದಾರೆ? ಅದೇ ನಮ್ಮ ದಾಸ ರಾಯರು – ತ್ಯಾಗ ರಾಜರು – ಬಸವಣ್ಣನವರು – ಸರ್ವಜ್ಞ – ಇವರಿಗೆಲ್ಲಾ ಯಾವ ಡಿಗ್ರಿ ಇತ್ತು? – ಯಾವ ಡಾಕ್ಟ್ರೇಟ್ ಬಂದಿತ್ತು? ಅವರ ಅಮೋಘ ಕೃತಿಗಳು – ಅಮೂಲ್ಯ ವಚನಗಳು – ಅಮರ ವಾಕ್ಯಗಳು. ಶತಶತಮಾನಗಳಾದರೂ ಎಂತಹ ಜ್ಞಾನ ದೀವಿಗೆಗಳಾಗಿವೆ? ಮುಂದೆ ಶತಶತಮಾನಗಳಾದ್ರೂ ಅಷ್ಟೇ ಜೀವಂತವಾಗಿರುತ್ವೆ – ಅಲ್ವೇ?''

''ನಾವು ಅವ್ರ ಪಾದ ದೂಳಿಗೂ ಸಮಯಿಲ್ಲ ಬುಡಿ. ಅಂದಂಗೆ ಮಾತ್ನಾಗೆ ಮರ್ತೇಬುಟ್ಟಿದ್ದೆ ಸಾ. ನಗ್‌ನಗ್ತಾಯಿರೋ ನಮ್ ನಾಯ್ಕರ ಮುಕ ಕಂಡಂತೆ – ಅಪರೂಪಕ್ಕೆ ಸಿಕ್ಕಿದ್ದೀರ – ನನ್ಗೂ ಬಾಯಿವೊಣಗೈತೆ – ರೇಡಿಯೇಟರ್ ಯೀಟಾಗೈತೆ – ಅದ್ಕೆ ನೀರು ಬೇಕು – ಅಂಗೇ ವನ್ ಬೈಟು ಡೀಸೈಲ್ ಆಕಾನ ಬನ್ನೀ ಸಾ'' – ಅಂದ. ಬೇಡಪ್ಪಾ ಅಂದ್ರೂ ಬಿಡ್ಲಿಲ್ಲ – ಬಲವಂತ ಮಾಡಿ ಕರ್ಕೊಂಡ್ಹೋದ – ಅಲ್ಲೇ ಇದ್ದ ಒಂದು ''ದರ್ಶಿನಿ''ಗೆ.

ಆ ಹೋಟಲ್‌ಗೆ ನಮ್ಮ ತಮ್ಮಣ್ಣ ರೆಗ್ಯುಲರ್ ಕಸ್ಟಮರ್ರು. ಅದಕ್ಕೇ ಆವರೆಲ್ಲರೂ ಇವನಿಗೆ ಪರಿಚಿತರು.

ಮಾಣಿ – ನಮ್ಮ ಟೇಬಲ್ ಮೇಲೆ ಎರಡು ಲೋಟ ನೀರು ಇಟ್ಟು – ಪಕ್ಕದ

ಟೇಬಲ್‌ನಿಂದ ನೀರಿನ ಮಗ್ಗು ತಂದಿಟ್ಟು – "ನಮಸ್ಕಾರ ಸಾರ್ – ಏನ್ಸಾರ್ ಚೆನ್ನಾಗಿದ್ದೀರ? ಈಗ ಹೇಗಿದೆ ನಿಮ್ ಹೆಲ್ತು?" – ಎಂದು ಕೇಳಿದ.

"ಚೆಂದಾಕಿದ್ದೀನಪ್ಪಾ – ಮಂಜುನಾತಾ."

"ಸದ್ಯ ಹೋಗ್ಲಿ ಬಿಡಿಸಾರ್ – ದೇವರದಯೆ."

"ವೂನಪ್ಪ – ನಮ್ದೇನೈತೆ? – ಯೆಲ್ಲಾ ಅವನ್ದೆ – ನೀನೆಂಗಿದ್ದೀಯ?"

"ಚೆನ್ನಾಗಿದ್ದೀನಿ ಸಾರ್."

"ಸಂತೋಸ – ಆಂ – ಪ್ರೆಸ್ಸಾಗೇನೈತೆ?"

"ತಿಂಡಿ ಏನೂ ಬೇಡ ತಮ್ಮಣ್ಣ – ಬರೀ ಕಾಫ಼ಿ ಸಾಕು" – ಅಂದೆ.

"ಸುಮ್ಕಿರಿ ಸಾರ್ – ನೀವು ಬರೀ ಪ್ಯಾಸೆಂಜರು – ಗಾಡಿ ವೋಡ್ಸೋನು ನಾನು."

ಮಾಣಿ – ತಿಂಡಿಗಳ ಹೆಸರುಗಳನ್ನು ಒಂದೇ ಸಮನೆ – "ಧಡಧಡಧಡ" ಹೇಳಲು ಪ್ರಾರಂಭಿಸಿದ.

"ನಿದಾನವಾಗಿ ಯೇಳ್ಲೇ ಮರಿ – ಅಸ್ಟು ಸ್ಪೀಡಾಗಿ ಯೇಳ್ತೀಯ. ವೋವರ್ ಸ್ಪೀಡಾದ್ರೆ ಯಾವ್ದಾದ್ರೂ ಟೆಲಿಫೋನ್ ಕಂಬಕ್ಕೆ ಮಡಗ್ಬುಡ್ತೀಯ – ಗಾಡೀನ."

"ಸರಿ ಸಾರ್."

"ನೋಡು – ನಮ್ಮಿಬ್ರಿಗೂ ವೊಂದೊಂದು ಪ್ಲೇಟು ಯಿಡ್ಲಿ ಕೊಡು – ಬಿಸಿಯಿರ್ಲಿ. ನಮ್ಮೈನೋರ್ಗೆ ವೊಂದು ಸ್ಪೆಸಲ್ ಬೆಣ್ಣೆ ಮಸಾಲೆ ಕೊಡು – ವೊಳ್ಳೆ ಬೆಣ್ಣೆ ಆಕು – ಗ್ರೀಸ್ ಮಡಗ ಬೇಡ."

"ಆಗ್ಲಿಸಾರ್."

"ಅಲ್ಲ ತಮ್ಮಣ್ಣ..." ಎಂದು ನಾನು ಪ್ರಾರಂಭಿಸುವಷ್ಟರಲ್ಲೇ.

"ನೀವು ಸುಮ್ಕಿರಿ ಸಾ – ಸೆಲೆಂಟ್ ಜೋನ್ನಾಗೆ ಗಾಡಿಯಿದ್ದಂಗೆ ಯಿರಿ" – ಅಂದ ತಮ್ಮಣ್ಣ.

"ಸರಿಯಪ್ಪ" – ಎಂದು ಕೆಟ್ಟೋದ ಗಾಡಿ ಹಾಗೆ ಕೂತ್ಕೊಂಡೆ.

ಇಡ್ಲಿ ಬಂತು – ಅದನ್ನು ನೋಡಿ ನಗುತ್ತಾ ಹೇಳಿದ ತಮ್ಮಣ್ಣ –

"ಯೇನ್ಲೇ ಮರಿ – ಯಿಡ್ಲಿ ಯಿಂಗಾಗೈತೆ?"

"ಹೇಗಾಗಿದೆ ಸಾರ್ – ಬಿಸಿ ಇಲ್ವಾ?"

"ಬಿಸಿ ಐತೆ – ಸೈಜು? ಯಿನ್ನೋವಾ ಅಂಗೆ ಯಿದ್ದಿದ್ದು – ಮಾರುತಿ ಜೆನ್ ಆಗ್ಬುಟ್ಟೈತೆ."

"ಹಾಗೇನಿಲ್ಲ ಸಾರ್ – ಏನೋ ಅಕಸ್ಮಾತ್..."

ಇಡ್ಲಿ ತಿನ್ನುತ್ತಾ ಸ್ಟಾರ್ಟ್ ಮಾಡ್ದ ಗಾಡೀನ ತಮ್ಮಣ್ಣ – ಕಂಟಿನ್ಯೂ ಮಾಡ್ದ ತನ್ನ ಕಾಯಿಲೆ ಕತೇನ.

''ವೊಂದ್ಟಿಂಗ್ಳು ಪೂರ್ತಾ ಬಿದ್ಬುಟ್ಟಿತ್ತು ಸಾ ಗಾಡಿ – ಗ್ಯಾರೇಜ್ನಾಗೆ – ಮುಗ್ದೋಗಿತ್ತು ನನ್ಕತೆ – ಸಮ್ಮಿಸ್ರ ಸರ್ಕಾರವಂಗೆ ಆಗೋಗಿತ್ತು. ಅದಿಕಾರ ಕಳ್ಕೊಂಡ ಪುಡಾರಿ ಅಂಗೆ – ಮಿಲಿ ಮಿಲಿ – ವೊದ್ದಾಡ್ಬುಟ್ಟೆ''

''ಹೌದಾ? – ಅಯ್ಯೋಪಾಪ! ಏನಾಗಿತ್ತು ತಮ್ಮಣ್ಣ?''

''ಅಯ್ಯೋ! ಅದೊಂದೊಧ್ಕತೆ ಸಾ – ಮೊದ್ಲು ಯೆಡ್ಡೇಕು ಸುರುವಾಯ್ತು – ಆಮೇಲೆ ವೊಟ್ಟೆನೋವು – ಆ ಮೇಲೆ ಬೆನ್ನು ನೋವು ಬಂತು – ಕೊನೇಗೆ ಐಟೆಂಪರೇಚರ್ರು. ಫೀವರ್ರು ಬಂದ್ಬುಡ್ತು – ಗಾಡಿ ನೆಲಕಚ್ಬಿಡ್ತು.''

''ಎಲ್ಲಾ ಒಂದೇ ಸಲಕ್ಕೆ ಬಂದ್ಬಿಟ್ಟಾ?''

''ಯಿಲ್ಲಾ ಸಾ – ಡಾಕ್ಟ್ರು ಜಾಸ್ತಿ ಚೇಂಜ್ ಮಾಡ್ತಾವೋದಂಗೆಲ್ಲಾ ಕಾಯ್ಲೇನೂ ಚೇಂಜ್ ಆಗ್ತಾವೋಯ್ತು.''

''ಅಲ್ಲಾ – ಯಾರಾದ್ರೂ ಸರಿಯಾದ ಡಾಕ್ಟರ್‌ಗೇ...?''

''ಯೇನ್ಸಾಯಿಂಗೇಳ್ತೀರಾ? – ನಮ್ ಫ್ಯಾಮಿಲಿ ಡಾಕ್ಟ್ರು – ದಾಮೋದರಂರವರು – ಸರಿಯಾದ ಡಾಕ್ಟ್ರೇ ಸಾ – ಸಕತ್‌ಡಾಕ್ಟ್ರು – ವೊಂಬತ್ಸಲ ವೋಗ್ಬಂದವ್ರೆ ಪಾರಿನ್‌ಗೆ. ನಮ್ಮೇರಿಯಾದಾಗೆಲ್ಲಾ ಬಲೇ ಪೇಮಸ್ಸು.''

''ಮತ್ತೇ...ಹೀಗಿದ್ದೂ...?''

''ಅದ್ಕೇ ಸಾ ಯೇಳೋದೂ – ಲಕ್ಕೂಂತ. ಪಾಪ! ಅವ್ರೂಬಲೇ ಕಸ್ಟಪಟ್ರೂ ಸಾ – ಕಾಯ್ಲೆ ಕಂಡಿಡಿಯಾಕೆ. ಆದ್ರೂನೂವೆ ಐಬು ಯೆಲ್ಲೈತೇಂತ್ಲೇ ಕಂಡಿಡಿ ಯಾಕಾಗ್ಲಿಲ್ಲ ಅವ್ರಕೈಯಾಗೆ – ಡಿಸೀಸೇ ಸಿಕ್ಲಿಲ್ಲ. ಮುಕ್ಯ ನನ್ನ ನಸೀಬೂ ಸಾ.''

''ನಿಜ ತಮ್ಮಣ್ಣ – ಎಂಥ ಫೇಮಸ್ ಡಾಕ್ಟ್ರಾಗ್ಲಿ – ಏನು ಪ್ರಾಬ್ಲಮ್ಮೂಂತ್ಲೇ ಗೊತ್ತಾ ಗೊಲ್ಲ – ಒಂದೊಂದ್ಸಲ.''

''ವೂಂ ಸಾ – ಆಗಾಕಿಲ್ಲ – ಯೆಲ್ಲೋ ಸೇರ್ಕೊಂಡ್ಬುಟ್ಟಿರ್ತೈತೆ – ನಮ್ ಮಂತ್ರಿಗ್ಳ ಆಸ್ತಿ ಅಂಗೆ'' ವೊಂದೊಂದಪ ನಮ್ ಗಾಡಿ ಯೆಂಜಿನ್‌ಗ್ಳೂ ಅಂಗೇ ಕೈಕೊಡ್ತವೆ.''

''ಸರಿ – ಆಮೇಲೆ ಡಾಕ್ಟ್ರು ಏನು ಹೇಳಿದ್ರು?''

''ಯೇನೇಳ್ತಾರೆ ಸಾ? – ಬಾಡಿಯೆಲ್ಲಾ ಟೆಸ್ಟ್‌ಮಾಡಿದ್ರು – ನೋಡಿದ್ರು – ಯಾವ್ದೋ ಬೋಲ್ಟು – ನಟ್ಟು ವೋಗ್ಯೆತೇಂದ್ರು – ತ್ರೆಡ್ಡು ಲೂಸಾಗ್ಯೆತೇಂದ್ರು – ವೈರುಕಿತ್ತೋಗ್ಯೆತೇಂದ್ರು – ಯೆಲ್ಲೋ ವಾಶರ್‌ವೋಗ್ಯೆತೇಂದ್ರು – ಯಿನ್ನೆಲ್ಲೋ ಸ್ಪ್ರಿಂಗ್ ಕಿತ್ತೋಗ್ಯೆತೇಂದ್ರು – ಆಮೇಲೆ ಬೆಲ್ಟು ಕಟ್ಟಾಗ್ಯೆತೇಂದ್ರು – ಪೆಟ್ರೋಲು ಸಾಕಾಗ್ತಾಯಿಲ್ಲಾಂದ್ರು – ಕೊನೇಗೆ ಯಾವ್ದೋ ಸ್ಪೇರ್ ಪಾರ್ಟು ವರ್ಕಾಗ್ತಾಯಿಲ್ಲಾಂದ್ರು.''

''ಪಾಪ! ಅವರೂ ಬಹಳ ಕಷ್ಟಪಟ್ಟಿದ್ದಾರೆ.''

"ಕಸ್ಟಯೇನ್ಸಾ? ಸುಸ್ತಾಗ್ಬುಟ್ರು – ವೊಟ್ಟಾಗೆ ಗಾಡೀನೆಲ್ಲಾ ಕಂಪ್ಲೀಟಾಗಿ ವೋವರಾಲ್ ಮಾಡಿದ್ರು – ಆಯಿಲ್ಲು – ಗ್ರೀಸು ಆಕಿದ್ರು."

"ಆಮೇಲೆ?"

"ಆಮೇಲೆ ಯಿನ್ನೊಂದಪ. ಫೈನಲ್ಲಾಗಿ – ಡೀಟ್ಯೆಲಾಗಿ ಚೆಕಪ್‌ಮಾಡಿ – ನಿನ್ಗೇನೂ ಐಬಿಲ್ಲ – ಗಾಡಿ ಸ್ವಲ್ಪ ಜಾಸ್ತಿ ವೋಡತೆ – ಮೈಲೇಜು ಯೆಚ್ಚಾಗ್ತೈತೆ – ಅದ್ಕೇ ಯಿಂಜಿನ್ನು ವೋವರ್ ಯೀಟಾಗಿ ಸ್ವಲ್ಪ ಕರಾಬಾಗ್ಯೆತೆ – ಬಾಕಿಯೆಲ್ಲಾ ವೊಳ್ಳೇ ಕಂಡೀಸನ್ನಾಗ್ಯೆತೆ – ಯೇನೂ ಬಯಯಿಲ್ಲ – ಸ್ವಲ್ಪ ರೆಸ್ಟು ತಗೋ ಯೆಲ್ಲಾ ಸರಿವೋಗ್ತೈತೆ – ಅಂತ ಯೇಳಿ – ಮಾತ್ರೆ – ಜಾಸ್ದಿ – ಸಿರಪ್ಪು – ಟಾನಿಕ್ಕು ಯೆಲ್ಲಾ ಬರ್ದು ಕೊಟ್ಟು ಕಳಿಸಿದ್ರು."

"ಒಟ್ನಲ್ಲಿ ಗಾಡೀಗೆ ಒಂದು ತಿಂಗಳು ರೆಸ್ಟೂನ್ನು."

"ರೆಸ್ಟೇನ್ಸಾ? – ಗಾಡಿ ರಸ್ಟು ಯಿಡಿದೋಗಿತ್ತು – ಜಾಸ್ತಿ – ಮಾತ್ರೆಯೆಲ್ಲಾ ಬಿದ್ಮೇಲೆ – ನಿದಾನ್ವಾಗಿ ಸರಿವೋಯ್ತು."

"ತಿಂಗಳು ಗಟ್ಲೆ – ಸುಮ್ನೆ ಮನೇಲಿರೋದೂಂದ್ರೆ ಬಹಳ ಕಷ್ಟ ತಮ್ಮಣ್ಣ."

"ಯಿನ್ನೇನ್ಸಾ? ಅಧಿಕಾರ ಕಳ್ಕೊಂಡು ಅಪೋಸೀಸನ್ ಸೀಟ್ನಾಗೆ ಕುಳಿತೋರ ಅವಸ್ತೆಯೆಂಗಿರ್ತೈತೆ? – ಅಂಗಾಗ್ಬುಡ್ತೈತೆ ಸಾ – ಪ್ರಾಣವೋದಂಗಾಗ್ಬುಡ್ತೈತೆ. ಆ ಸಿಕ್ಸೆ ನಮ್ ಸತ್ರೂಗೂ ಬೇಡ."

"ನಿಜತಮ್ಮಣ್ಣ – ಪಾಪ – ಏನೋಗ್ರಹಚಾರ. ಹೋಗ್ಲಿ – ಸದ್ಯದೇವರದಯೆ – ಎಲ್ಲಾ ಸರಿಹೋಯ್ತಲ್ಲ – ಅದೇ ಸಂತೋಷ."

"ಯಿನ್ನೇನ್ಸಾ? – ದೇವ್ರು ದೊಡ್ಡೋನು – ನಿಮ್ಮಂತೋರ ಆಸೀರ್ವಾದ – ಗಾಡಿವುಳ್ಕೊಂಡು – ತಿರ್ಗಿರೋಡ್ ಮೇಲೆ ಬಂತು. ಇದೊಂತರಾ – ರೀಯೆಲೆಕ್ಸನ್ನಾಗೆ ತಿರ್ಗಿಗೆದ್ದಂತಾಯ್ತು."

"ಇದೆಲ್ಲಾ ಕೇಳಿದ್ರೆ ಭಯವಾಗುತ್ತಪ್ಪ."

"ನಿಮಗ್ಯಾಕ್ಸಾ ಭಯ?"

"ಇನ್ನೇನು ತಮ್ಮಣ್ಣಾ – ಇನ್ನೂ ಮೂವತ್ತು ಮೂವತ್ತೈದು ವರ್ಷದೋರು ನೀವು. ನಿಮಗೇ ಹೀಗಾದ್ರೆ – ಎಪ್ಪತ್ತು ಎಪ್ಪತ್ತೈದು ವರ್ಷದೋರು ನಾವು – ನಮ್ಮಗತಿ ಏನು?"

"ಅಯ್ಯೋ ಬುಡಿಸ್ಸಾ – ನಿಮಗ್ಯಾಕ್ಯೋಚ್ನೆ – ವೋಲ್ಡ್ ಮಾಡಲ್ – ಫೋರ್ಡ್‌ಗಾಡಿಗ್ಳು ನೀವು. ನಮ್ದೆಲ್ಲಾ ಯೀಗಿನ್ಕಾಲ್ದೋವು. ಗೆಟಪ್ ಐತೆ – ಶೋ ಐತೆ – ಆದ್ರೆ ಬಲು ಸೂಕ್ಸ್ಮ – ವೊಡೆತಕ್ಕೆ ತಡೆಯಾಕಿಲ್ಲ – ಪುಡಿಪುಡಿ ಆಗ್ತವೆ – ರವೆವುಂಡೆ ಯಿದ್ದಂಗೆ."

"ಅಷ್ಟೇಂತೀಯ?"

"ಅಸ್ಟೇ ಅಲ್ಲಾ ಸಾ – ನಿಮ್ಮಂಗೆ ಪಿಕಪ್ ಐತಾ? ಪುಲ್ಲಿಂಗ್ ಪವರ್ ಐತಾ? – ಲೋಡ್ ಯೆಳೀತೈತಾ? – ಬಾಳ್ಕೆ ಬರ್ತೈತಾ? – ಬಾಡಿ ಬಿಲ್ಡಿಂಗು – ಚಾಸೀಸು ಯೆಲ್ಲಾ ಅಸ್ಟೇ ಸಾ.

ವೊಂದು ಮೈನರ್ ಆಕ್ಸಿಡೆಂಟಾಯ್ತು ಮುಗೀತು – ಗಾಡಿ ಕತಂ. ಸ್ವಲ್ಪ ವುಚ್ಚಿದ್ರೂ ಸಾಕು ಜಜ್ಜಿ ವೋಗ್ತೈತೆ. ನಿಮ್ದೋನ್ಸಾ ಆಟೋ ಕಾಲ್ದ ವೋರ್ದು – ಸವರ್‍ಲೇ – ಲಾರಿಗಳಿದ್ದಂಗೆ"

"ಏನೋ ಎಲ್ಲಾ ಆವನ ದಯೆ ತಮ್ಮಣ್ಣಾ."

"ಸತ್ಯವಾಗ್ಲೂ ಸಾ."

"ಅಷ್ಟರಲ್ಲಿ ತಿಂಡಿ ಮುಗಿದಿತ್ತು – ಮಾಣಿ ಬಂದ."

"ನೋಡು ಮರಿ – ಬಿಸಿಬಿಸಿ – ಸ್ಟ್ರಾಂಗ್ ಕಾಪಿ ತಗೊಂಡ್ಬಾ – ಯೆಂಜಿನ್ನಾಯಲ್ಲಂಗೆ ಮಾಡ್ಬುಟ್ಟೀಯ."

"ಇಲ್ಲ ಸಾರ್ – ಪೈಕ್ಲಾಸ್ ಕಾಫ್ಹಿ ತರ್ತೀನಿ."

ನಿಜವಾಗ್ಲೂ ಕಾಫ್ಹಿ ಫೈಕ್ಲಾಸಾಗಿತ್ತು. ತಮ್ಮಣ್ಣನೇ ಬಿಲ್ ದುಡ್ಡುಕೊಟ್ಟ – ಮಾಣಿಗೆ ಐದು ರೂಪಾಯಿ ಕೊಟ್ಬ ಅಲ್ಲಿಂದ ಹೊರಟ್ವಿ.

"ವುಡ್ಗ ಬಲು ಚೂಟಿ ಸಾ – ಅತ್ತನೇ ಸ್ಟಾಂಡರ್ಡ್‍ಗೆ ಕಟ್ಟವ್ನೆ .... ವೊಳ್ಳೇ ಮಾರ್ಕುತೆಗೀತಾನೆ. ಯೇನ್ಮಾಡೋದು? – ಬಡತನ – ವೊಟ್ಟೆ ಪಾಡು. ಯಿಂದ್ಗಡೆಯಿಂದ ತಳ್ಳೋರಿಲ್ಲ – ಮುಂದ್ಗಡೆ ಯಿಂದ ಯೆಳ್ಕೊಳ್ಳೋರಿಲ್ಲ. ಅದ್ಕೇ ಸಾ – ನಾನು ಬಂದಾಗ್ಲೆಲ್ಲಾ – ಯೇನೋ ನನ್ ಕೈಲಾದಷ್ಟು..."

"ಒಳ್ಳೇದಪ್ಪ – ಅದೇನಪ್ಪ ನಿಮ್ಮನ್ನ ನಿಮ್ಮ ಮಕ್ಕಳನ್ನ ಕಾಪಾಡೋದು."

"ಔದೂ ಸಾ – ನೋಡೀ ಸಾ – ಲಾಂಗ್ ಜರ್ನಿಯಾಗೆ – ನಮ್ ಗಾಡಿ ಸಲೀಸಾಗಿ ವೋಗ್ತಾಯಿರ್ತೈತೆ. ಮದ್ಯ ವೂರಿಲ್ಲ – ಜನಗ್ಳಿಲ್ಲ – ಅಂತಾಸ್ತಳ್ದಾಗೆ ಯಿನ್ನೊಬ್ರ ಗಾಡಿಯೆಡವಟ್ಟಾಗೈತೆ. ಅದ್ನನೋಡ್ಕೊಂಡು ಅಂಗೇ ವೋಗ್ಬುಡೋದಾ? ಅದು ದರ್ಮಾನಾ? ಅವ್ರಿಗೆ ಸ್ಪಾನರ್ರೋ – ಜಾಕೋಕೊಟ್ಟು – ನಾವೂವೊಂದು ಕೈ ಆಕಿ ಅವ್ರಗಾಡೀನೂ ವೋಡೋ ಅಂಗೆ ಮಾಡಿದ್ರಲ್ವಾ ಬಗ್ವಂತ ಮೆಚ್ಕೊಳ್ಳೋದು?"

"ಖಂಡಿತ – ಆಗ್ಲೇ ಭಗವಂತ ನಮ್ ಗಾಡಿಗೂ ಇನ್ನಷ್ಟು ಸ್ಟ್ರೆಂಗ್ತ್ ಕೊಡ್ತಾನೆ. ಲಾಂಗ್ ಲೈಫ್‍ನೂ ಕೊಡ್ತಾನೆ. ಇಂಥ ಒಳ್ಳೆ ಬುದ್ಧಿ ನಮ್ಮ ಜನಸೇವಕರು – ಅನ್ನಿಸ್ಕೊಂಡಿರೋರ್‍ಗೆ ಇದ್ದಿದ್ರೆ...?"

"ಯಿದ್ದಿದ್ರೆ ನಮ್ದೇಸ ಯಿಂಗಾಕಿರ್ತಿತ್ತು ಸಾ? ಯಿಂತಾ ವುಡುಗ್ರು ಯಿಂಗ್ಯಾಕಿರ್ತಿದ್ರು? ಆಯಾಗಿ ಆಡ್ಕೊಂಡು – ಪಾಡ್ಕೊಂಡು – ವೋದ್ಕಂಡು – ಬುದ್ದಿವಂತ್ರಾಗಿ ರೋರು – ನಮ್ ದೇಸಕ್ಕೂ ಕೀರ್ತಿತಂದಿರೋರು."

"ನಿಜ – ಅದಿರ್‍ಲಿ – ಇದೇನು ಬೆಳಿಗ್ಗೆ ಎಂಟು ಗಂಟೆಗೆಲ್ಲಾ ಹೊರಟಿದ್ದೀಯ – ಇನ್ನೂ ಡ್ಯೂಟೀಗೆ ಹೋಗ್ತಾ ಇಲ್ವಾ?"

"ಯೆಲ್ಡುವಾರ್‍ದಿಂದ ವೋಗ್ತಾಯಿದ್ದೀನಿ ಸಾ – ನಂಗೆ ಯೀಗ ಟೂತರ್ಟಿ ಸಿಫ್ಟು. ಯಿದು ರೆಗ್ಯುಲರ್ ರೂಟಲ್ಲಾ ಸಾ– ಪೀಯೆಚ್ಚೆಸ್ನಾಗೆ ವೊಂಟಿದ್ದೀನಿ?

"ಹೌದಾ?"

"ವೂಂಸಾ - ಆಗ಼್ೇ ಯೇಳಿದ್ನಲ್ಲಾ - ಗಾಡಿ ಸೈಡ್ಬುಟ್ಟು ವೊಂದು ತಿಂಗ್ಳಾಗಿತ್ತು - ಬೇಜಾರಾಗ್ಬುಟ್ಟಿತ್ತು. ಜತೇಗೆ ಮನೆ ಯಾಗೆ ತರಕಾರಿ ಯಿರ್ಲಿಲ್ಲ - ನನ್ ಟಾಬ್ಲೆಟ್ಟುಗ್ಳೂ ಮುಗಿದೋಗಿತ್ತು."

"ಅದ್ಸರಿ - ಆದ್ರೆ ಪಾಪ! ನೀನಿನ್ನೂ ಸರಿಯಾಗಿ ರಿಕವರ್ ಆಗಿಲ್ಲ - ನೀನೇ ಯಾಕೆ ಹೋಗ್ಬೇಕು? ಇನ್ಯಾರನ್ನಾದ್ರೂ ಕಳಿಸಿದ್ರೇ...?"

"ಯಿನ್ಯಾರವ್ರೇ ಸಾ? - ನನ್ ಟ್ರೈಲಿರ್ ಗಾಡಿ - ಅದ್ಕೂ ಚೆಂದಾಗಿಲ್ಲ - ಯೇನೋ ಸ್ವಲ್ಪ ಪ್ರಾಬ್ಲಂ ಐತೆ - ಬ್ರೇಕ್ ಪೇಲಾಗ್ಯೆತೆ. ಅದ್ಕೂ ವೊವರಾಲಾಯ್ತು. ಯಿನ್ನೂ ಯಿನ್ಸ್ಪೆಕ್ಸನ್ನಾಗ್ಯೆತೆ. ಯೇನೋ ನಮ್ಮಿಬ್ರಿಗೆ ಕಾಯಿಲೆ ಅಸ್ತಾಂತ್ರ ಆಗಿದ್ದಂಗ್ಯೆತೆ."

"ಹಸ್ತಾಂತರ! - ದೊಡ್ಡ ಅವಾಂತರ - ಗಂಡಾತಂರ! ಅದೇನು ನಾಟಕ! ಅದೇನು ಡೈಲಾಗ್ಸು! ಅದೇನು ಆಕ್ಟಿಂಗು! - ಸದ್ಯ ಕೊನೆಗೂ ಮುಗೀತು."

"ನಮ್ ನಾಯ್ಕರ ಬುದ್ದೀನೇ ಅಂಗೆ ಸಾ. ಅವ್ರಮನಸ್ನಾಗೆ ಯೇನಿರ್ತೈತೆ ತಿಳೀತ್ತೈತಾ? ವೊಂದರ್ಧ ಗಂಟೆ ವೊತ್ತು, ವೊಂದೇ ಮನ್ಸು - ವೊಂದೇ ಬುದ್ದಿ ಯಿರ್ತೈತಾ? ಕ್ಸಣಕ್ಕೊಂದು ಮಾತು - ಕ್ಸಣಕ್ಕೊಂದು ಯೋಚ್ನೆ - ಯೆಲ್ಲಾ ಸಸ್ಪೆನ್ಸು.'

"ಹೌದು - ಏನು ತಿಳಿಯೋದೂ ಇಲ್ಲ - ಯಾವ್ದೂ ಗ್ಯಾರಂಟೀನೂ ಇಲ್ಲ."

"ಜೀವನಾನೂ ಅಂಗೇ ಸಾ. ಅದೇ ನೀವು ಯೇಳೋ ಅಂಗೆ..."

"ಪ್ರಕೃತಿ ರಹಸ್ಯ - ದೈವ ಸಂಕಲ್ಪ."

"ಹೌದೂ ಸಾ."

"ಎಲೋ ಸ್ವಾರ್ಟಾಗಿ ಎಲ್ಲೋ ಬಂದ್ಬಿಟ್ಟೆ. ಆಂ - ಅಂದ್ಹಾಗೆ - ನಿನ್ನ ಮಕ್ಕಳಾದ್ರೂ ಹೋಗಬಹುದಾಗಿತ್ತಲ್ಲಾ ಅಂಗಡೀಗೆ?"

"ಅಯ್ಯೋ ಅದ್ರಯಿಸಯ ಯಾಕೇಳ್ತೀರಾ ಸಾ? ದೊಡ್ಡೋವ್ನು ಅತ್ತನೇ ಸ್ಟಾಂಡರ್ಡ್‌ಗೆ ಕಟ್ಬವ್ನೆ. ಅವನ್ಗೆ ರೆಗ್ಯುಲರ್ ರೂಟೇ ಯಿಲ್ಲ - ಆಲ್‌ಯಿಂಡಿಯ ಪರ್ಮಿಟ್ ಗಾಡಿ - ಯಾವಾಗ್ಲೂ ಸ್ಪೆಸಲ್ ಟ್ರಿಪ್ಪು - ಅಂದ್ರೆ ಬಾಡಿಗೆ ಯಿಲ್ದೆ ಗಾಡಿ ವೋಡ್ಸೋ ಬಾಬ್ತು. ಯೆರಡ್ನೇವ್ನು ಯೆಂಟ್ನೇ ಸ್ಟಾಂಡರ್ಡು ಪರೀಕ್ಸೆ ಮುಗೀತು - ಅವ್ನತಾತ್ನವೂರಿಗೆ ವೋಗವ್ನೆ - ಟೂರಿಸ್ಟು - ಔಟ್ ಸ್ಟೇಟ್ ವೋಗ್ಯೆತೆ ಗಾಡಿ. ಯಿನ್ನು ಮಿಕ್ಕೋವು - ಯೆಲ್ದು ಯೆಣ್ಣು. ಯಿನ್ನೂ ಚಿಕ್ಕೋವ್ರು. - ವೊಂಟಿಯಾಗಿ ವೋಗಾಕೆ ಯಿನ್ನೂ ಡ್ರೈವಿಂಗ್ ಲೈಸೆನ್ಸ್ ಕೊಟ್ಟಿಲ್ಲ. ಯೀಟ್ರಾಫಿಕ್ನಾಗೆ ಬಲೇ ಕಸ್ಟ ಸಾ. - ಅದ್ಕೇ ಯಲ್ ಬೋರ್ಡು ಆಕ್ಕೊಂಡು ಮನೆ ತಾವಾನೇ ವೋಡಾಡ್ತವೆ."

"ಹೌದಪ್ಪ - ಈಗ ರಸ್ತೇಲಿ ಓಡಾಡೋದು ದೊಡ್ಡವರಿಗೇ ಕಷ್ಟ - ಡೇಂಜರು - ರಿಸ್ಕು. ಅಂಥಾದ್ರಲ್ಲಿ ಪಾಪ 'ಪುಟ್ಟ ಮಕ್ಕಳು.'"

''ಅದ್ಕೇನಾ - ಯೆಲ್ಲಾವಕ್ಕೂ ನಾನೇ ಪೋಗೋದು.''

''ಹೋಗಬಹುದು - ಅದ್ರಲ್ಲೇನೂ ತಪ್ಪಿಲ್ಲ - ಆದ್ರೆ ನಿನಗೆ ಇನ್ನೂ ವೀಕ್‌ನೆಸ್ ಇದೆ - ಸ್ಟ್ರೆನ್ ಆಗುತ್ತಲ್ಲಾಂತ - ಅಷ್ಟೆ''

''ಯೇನ್ಸಾ ಮಾಡೋದು? ಯೆಲ್ಲಾ ಅವ್ನಯಿಚ್ಛೆ - ಅವ್ನಂಗೆ ಬುದ್ದಿ ಕೊಟ್ರನಾವಂಗೇ ಸಾ.''

''ಸತ್ಯ - ನಿನ್‌ಮಾತು - ಅಂದ್ರೇ ನಿನ್ಗೆ ದೇವರಲ್ಲಿ ಬಹಳ ಭಕ್ತಿ - ನಂಬಿಕೆ ಇದೇನ್ನು.''

''ಯೇನ್ಸಾ ಯಿಂಗೇಳ್ತೀರ? - ಅವನಿಲ್ದೆ ಯೇನೈತೆ ಸಾ? ಅವನ್ದಯೆ ಯಿದ್ರೇನೇ ಸಾ ನಾವೆಲ್ಲಾ. ನೋಡೀ ಸಾ - ಅವ್ನ ಕರುಣೆ ಯಿದ್ರ ಯೀಗಾಡಿ ರೋಡ್‌ಮ್ಯಾಗೆ - ಯಿಲ್ದಿದ್ರೆ ಅಳ್ಳಾಗೆ - ಅಲ್ವಾ ಸಾ? ಅವನ್ಗೇನಾದ್ರೂ ಕೋಪ ಬಂದುಬುಟ್ರೆ - ಕ್ಲಚ್ಚೂ ಆಫ್ ಮಾಡಕ್ಕಿಲ್ಲ - ಬ್ರೇಕೂ ಯಿಡಿಯಾಕಿಲ್ಲ.''

''ನಿಜ.''

''ಅಂಗೇ ಯೋಚ್ನೆ ಮಾಡಿ ನೋಡೀ ಸಾ - ಯೇನೈತೆ ನಮ್ತಾವ: ಅವ್ನೂ ಬಲೇ ಬುದ್ವಂತ - ಯೆಲ್ಲಾ ಅವ್ನೇ ಮಡಕ್ಕೊಂಡು - ನಮ್ಗೆ ಬರೀ ಯೆಂಜಿನ್ ಕೊಟ್ಟವ್ನೆ. ಸ್ಟಾರ್ಟರ್ ಅವನ್ತಾವ - ಯಕ್ಸಿಲೇಟರ್ ಅವನ್ತಾವ - ಕ್ಲಚ್ಚು - ಗೇರು - ಬ್ರೇಕು ಯೆಲ್ಲಾ ಅವನ್ತಾವ - ಮುಕ್ಯವಾಗಿ ಸ್ಟೇರಿಂಗೇ ಅವನ್ತಾವ, ಅವ್ನು ಯೆಂಗೆ ತಿರುಗಿಸಿದ್ರೆ ನಾವು ಅಂಗೆ ತಿರುಗ್ಬೇಕು. ನೆಮ್ದಿಯಾಗಿರೋದಕ್ಕೆ ಟಿಕೆಟ್ಟು ಕೊಡೋವ್ನೂ ಅವ್ನೇ - ಪರಲೋಕಕ್ಕೆ ಟಿಕೆಟ್ಟು ಕೊಡೋವ್ನೂ ಅವ್ನೆ. ರೆಡ್‌ಲೈಟೋ - ಗ್ರೀನ್ ಲೈಟೋ - ಸಿಗ್ನಲ್ ಲೈಟ್‌ಗ್ಳೇ ಅವನ್ತಾವ. ವೊಟ್ನಾಗೆ ಅವ್ನ ನಮ್ಮ ಐ ಕಮಾಂಡು - ಔದೋ? - ಅಲ್ವೋ?''

''ಓಹೋ! ಡೌಟೇ ಇಲ್ಲ.''

''ಯಿನ್ನು ನಮ್ಮ್ಯಾಕ್ಸಾ ಸುಮ್ನೆದುರಂಕಾರ? ದೊಡ್ಡೋರು ಯೇನೇಳವ್ರೆ? ಲೈಫ್ನಾಗೆ ಸ್ಪೀಡ್ನಲಿಮಿಟ್ನಾಗೆ ಮಡಕ್ಕೊಂಡು - ದೇವ್ರು - ದಿಂಡ್ರು - ಬಯ - ಬಕ್ತಿ - ಯೆಲ್ಲಾ ಮಡಕ್ಕೊಂಡು ವುಸಾರಾಗಿ ವೋದ್ರೆ ಟರ್‌ಮಿನಸ್ ವರ್‍ಗೂ ವೋಗ್ಬೋದು - ಯಿಲ್ದಿದ್ರೆ - ಸ್ಟೇಜ್ ಪಾಯಿಂಟ್‌ವರ್‍ಗೂ ವೋಗೋಕಾಗಾಕಿಲ್ಲ. ಮೇಲ್ಗಡೆ ವೊಬ್ನವ್ನೆ. ಅವ್ನೇ ಸೂಪರ್‌ವೈಸರು - ಚೆಕ್ಕಿಂಗ್ ಯಿನ್‌ಸ್ಪೆಕ್ಟ್ರು - ಯೆಲ್ಲಾ.''

''ಖಂಡಿತ - ತಮ್ಮಣ್ಣ''

''ನೀತಿ - ನಿಯಮ ಸ್ವಲ್ಪ ಕೆಟ್ರೂ ಸಾಕುಸಾ - ನಮ್ ಜೀವ್ನಾನೇ ಕೆಟ್ಟಂಗೆ - ಗಾಡಿ ಬ್ರೇಕ್ ಡೌನು - ಯಿಲ್ಲ ಆಕ್ಸಿಡೆಂಟು ಅದ್ರಾಗೂ ವೋವರ್ ಸ್ಪೀಡ್ನಾಗೇನಾದ್ರೂ ವೋದ್ರೋ - ವೊಂದಲ್ಲ ವೊಂದಿವ್ಸ - ವುಣಸೇಮರಕ್ಕಿಕ್ಕೋದು ಗ್ಯಾರಂಟಿ. ಬರೇ ಗಾಡಿ ವೋಡ್ಸೋದ್ರಾಗೇ ಅಲ್ಲಾ ಸಾ - ಲೈಫ್ನಾಗೂ ಅಸ್ಟೆ - ನಿದಾನಯಿರ್ಬೇಕು - ಸಾಂತವಾಗಿರ್ಬೇಕು -

ದುಡುಕ್ಬಾರ್ದು. ದುಡುಕು – ದುರ್ಬುದ್ಧಿ – ದುರಾಲೋಚ್ನೆ – ಯಿವೆಲ್ಲಾಯಿದ್ರೆ ಯೇನಾಗ್ತೈತೆ? ಅದ್ಕೆ – ದುರ್ಯೋದ್ನ – ದುಸ್ಸಾಸ್ನ ಯಿವ್ರೇಯೆಕ್ಸಾಂಪಲ್ಲು.''

''ಏನೋ ಅಂತಿದ್ದೆ – ನೀನು ಒಳ್ಳೇ ವೇದಾಂತಿ ತಮ್ಮಣ್ಣ.''

'ಚೇ ಬುಡೀ ಸಾ – ಅಂಗೇನಿಲ್ಲ. ಯೆಲ್ಲಾನಮ್ಮಿಂದ್ನೋರು – ಮಾನುಬಾವ್ರು – ನಿಮ್ಮಂತ ತಿಳಿದೋರು ಯೇಳಿರೋದು ನನ್ದೇನೈತೆ?''

ಅಷ್ಟರಲ್ಲಿ ಅವನ ಮನೆ ಸಮೀಪಿಸಿತ್ತು.

''ಯಿನ್ನುಬರ್ಲಾ ಸಾ? ಡ್ಯೂಟಿ ಐತೆ – ವೊತ್ತಾಗ್ತೈತೆ – ನಮಸ್ಕಾರಾ ಸಾ'' – ಅಂದ.

''ನಮಸ್ಕಾರಾ – ಹೋಗ್ಬಿಟ್ಬಾಪ್ಪ ತಮ್ಮಣ್ಣ – ದೇವ್ರು ಒಳ್ಳೇದ್ಮಾಡ್ಲಿ'' – ಅಂದೆ.

''ನಮ್ದೇನೈತೆ ಸಾ? – ಯೆಲ್ಲಾ ಅವನ್ದೇ – ಎಂದು ಹೊರಟ.


ಮಾತಿನ ಭರದಲ್ಲಿ ತಮ್ಮಣ್ಣ ತರಕಾರೀನೂ ತಗೊಳ್ಳಿಲ್ಲ – ಮಾತ್ರೇನೂ ಮರ್ತಿದ್ದ.''

ಮುಖ್ಯವಾಗಿ ದೇವರು ಅವನ ಗಾಡಿಯ ಸ್ಟೇರಿಂಗನ್ನು ಮಾರ್ಕೆಟ್ ಕಡೆ ತಿರುಗಿಸಿರಲಿಲ್ಲ – ಮನೆ ಕಡೆ ತಿರುಗಿಸಿದ್ದ.

ನಾನೂ ಹಾಗೇ ಅವನು ಹೇಳಿದ್ದನ್ನೆಲ್ಲಾ ಮೆಲುಕು ಹಾಕುತ್ತಾ ನನ್ನ ಷೆಡ್ಡು ಸೇರ್ಕೊಂಡೆ.

ಅಂದ್ಹಾಗೆ ನಾನು ಹೊರಟಿದ್ದುದೂ ತರಕಾರಿಗೋಸ್ಕರವೇ – ನಾನೂ ಅದನ್ನು ಮರೆತಿದ್ದೆ.

ಮುಖ್ಯ – ''ನಮ್ದೇನೈತೆ? – ಯೆಲ್ಲಾ ಅವನ್ದೇ'' – ಅಲ್ವೇ?



ಊಟ

- ಕು.ಗೋ.

ಬೆಳಗ್ಗೆ ಬೇಗನೆ ಎಚ್ಚರವಾಯಿತು. ಗಡಿಯಾರ ಮೂರು ಗಂಟೆ ಹತ್ತು ನಿಮಿಷ ತೋರಿಸುತ್ತಿತ್ತು. ಒಳಗೆ ಹೊರಗೆ ಹೋಗಿ ಬಾಯಿ ಮುಕ್ಕಳಿಸಿ ಎರಡು ಲೋಟ ನೀರು ಕುಡಿದು ಮೂರೂವರೆ ಗಂಟೆ ಅಷ್ಟೇ ಆಗಿದ್ದರೂ ಮತ್ತೆ ಮಲಗಲು ಮನಸ್ಸಾಗದೆ ನನ್ನ ಟೇಬಲ್ಲಿನ ಬಳಿ ಸಾಗಿ ಡೈರಿ ತೆಗೆದೆ. ಆದಿನ ಒಂದು ಶ್ರಾದ್ಧದ ಊಟವಿತ್ತು. ಕಳೆದ ವರ್ಷದ ಡೈರಿಯತ್ತ ಕಣ್ಣು ಹಾಯಿಸಿದೆ. ಎಲ್ಲ ದಿನಗಳಲ್ಲಿ ನಾನು ಏನೇನು ಮಾಡಿದ್ದೆ, ಎಲ್ಲಿಗೆಲ್ಲ ಹೋಗಿದ್ದೆ ಎಂಬುದನ್ನು ನೋಡುತ್ತಾ ಹೋದೆ. ಮುನ್ನೂರ ಅರವತ್ತೈದು ದಿನವಸಗಳಲ್ಲಿ ಮಧ್ಯಾಹ್ನ, ರಾತ್ರಿ ಅಂತ ಸುಮಾರು ನೂರ ತೊಂಬತ್ತೆಂಟು ದಿವಸ ನಾನು ಬೇರೆ ಬೇರೆ ಕಡೆ ಊಟಕ್ಕೆ ಹೋದದ್ದು ಗಮನಕ್ಕೆ ಬಂತು. ಒಂದು ಎರಡು ಹೆಚ್ಚು ಕಡಿಮೆ ಇರಬಹುದು ಅಷ್ಟೆ. ಪರಿಚಿತರ, ಬಂಧುಗಳ ಸಂಖ್ಯೆ ಹೆಚ್ಚಾಗಿ, ನಿವೃತ್ತನಾಗಿದ್ದುದರಿಂದ ನಮ್ಮ ಮನೆಯಿಂದ ನಾನು ಒಬ್ಬನೇ ಹೋಗಬೇಕಾಗಿದ್ದುದರಿಂದ ಹೇಳಿಕೆ ಬಂದೆಡೆಗಳಿಗೆಲ್ಲಾ ನಾನು ಒಬ್ಬನೇ ಹೋಗಿ ಬರುತ್ತಿದ್ದೆ. ಕೆಲವು ದಿನ ಮೂರು ನಾಲ್ಕು ಕಡೆಗಳ ಹೇಳಿಕೆ ಇದ್ದು ಎಲ್ಲ ಕಡೆಗೂ ಬೇರೆ ಬೇರೆ ಸಮಯದಲ್ಲಿ ಅಲ್ಲಿಗೆ ಭೇಟಿ ಇತ್ತು, ಊಟದ ಸಮಯವಾದರೆ ಊಟ, ತಿಂಡಿಯ ಸಮಯವಾದರೆ ತಿಂಡಿ, ಏನೂ ಇಲ್ಲದ ಸಮಯವಾದರೆ ಕಾಫಿಯನ್ನಾದರೂ ಕುಡಿದು ಬರುತ್ತಿದ್ದೆ. ಎಲ್ಲ ಕಡೆಯಲ್ಲೂ, ಎಲ್ಲರ ಮನೆಯಲ್ಲೂ ಒಂದಲ್ಲ ಒಂದು ಸಮಾರಂಭ ಇದ್ದೇ ಇರುತ್ತಿತ್ತು. ಇದರಲ್ಲಿ ಯಾವುದನ್ನೂ ತಪ್ಪಿಸಿಕೊಳ್ಳದೆ ಸೌಜನ್ಯಕ್ಕಾದರೂ ಬಂಧುತ್ವವನ್ನು, ಸ್ನೇಹವನ್ನು ಊರ್ಜಿಸಿಕೊಳ್ಳಲು ನಾನು ಹೋಗಿ ಬರುತ್ತಿದೆ. ಬೊಜ್ಜ, ವೈಕುಂಠ, ಶ್ರಾದ್ಧ, ಷಷ್ಠ್ಯಾಬ್ಧ, ಸಹಸ್ರ ಚಂದ್ರದರ್ಶನ, ಮದುವೆ, ಮುಂಜಿ, ಚವಲ, ನಾಮಕರಣ, ಅಕ್ಷರಾಭ್ಯಾಸ, ಹುಟ್ಟುಹಬ್ಬ ಸೀಮಂತ, ಮಹಾಲಯ, ಮನೆ ಒಕ್ಕಲು, ಸತ್ಯನಾರಾಯಣ ಪೂಜೆ, ಶನಿಪೂಜೆ, ಅಶ್ವತ್ಥ ಉಪನಯನ, ನಾಗತನು, ಚಂಡಿಕಾಹೋಮ, ದುರ್ಗಾ ನಮಸ್ಕಾರ, ರಾಶಿಚಕ್ರಪೂಜೆ, ವೈವಾಹಿಕ ರಜತೋತ್ಸವ, ಚಿನ್ನೋತ್ಸವ ಹೀಗೆ ಒಂದೇ ಎರಡೇ! ದೇವರ ಮೇಲೆ ಭಯಭಕ್ತಿ, ಪೂಜೆಪುನಸ್ಕಾರಗಳಲ್ಲಿ ಆಸಕ್ತಿ, ಎಲ್ಲಕ್ಕಿಂತ ಹೆಚ್ಚಾಗಿ ತಮ್ಮ ಶ್ರೀಮಂತಿಕೆಯನ್ನು ಪ್ರದರ್ಶಿಸುವ ಹುಚ್ಚಾಟ. ಇವೆಲ್ಲವುಗಳಿಗೆ ಸಾಕ್ಷೀಭೂತವಾಗಿ ನಾನು ಎಲ್ಲ ಸಮಾರಂಭಗಳಿಗೆ ಕಡ್ಡಾಯವಾಗಿ ಹಾಜರಾಗುತ್ತಿದೆ. ಎಲ್ಲದರ ಮುಖ್ಯ ಆಕರ್ಷಣೆ ಊಟ. ಆದರಾತಿಥ್ಯವನ್ನು ತೋರಿಸಲು ಸಾಧ್ಯವಿರುವುದು ಈ ಊಟದಿಂದ ಮಾತ್ರ. ಕೆಲವರ ಮನೆಗೆ ಶ್ಯಾವಿಗೆ ತಿನ್ನಲು, ಪತ್ರೊಡೆ ತಿನ್ನಲು ವಿಶೇಷ ಅತಿಥಿಯಾಗಿ ಹೋಗುವುದೂ ಇದೆ, ಹೋದದ್ದೂ ಇದೆ. ಹೊಟ್ಟೆ ತುಂಬಿಸಿಕೊಳ್ಳಲು ಯಾವ ಸಮಸ್ಯೆಯೂ ಇಲ್ಲದೆ ಎಲ್ಲೆಲ್ಲೂ ಊಟ, ಊಟ. ಆರೋಗ್ಯಕ್ಕೂ ಈ ಊಟಕ್ಕೂ ತಳಕುಹಾಕುವವ ನಾನಲ್ಲ, ಆಹಾರದ ವಿಭಾಗವೇ ಬೇರೆ, ಆರೋಗ್ಯದ ವಿಭಾಗವೇ ಬೇರೆ ಎಂದು ಕೊಂಡವನು ನಾನು.

ಒಂದು ಗೊಡ್ಡು ಸಾರು, ಬೋಳು ಹುಳಿ, ಗುಳ್ಳ ಪಲ್ಯ, ತೆಂಗಿನಕಾಯಿ ಚಟ್ನಿ, ಒಂದು

ತಂಬುಳಿ, ಸ್ವಲ್ಪ ಮಜ್ಜಿಗೆ ಇದ್ದರೆ ಅದೇ ನನಗೆ ಒಂದು ಮೃಷ್ಟಾನ್ನ ಭೋಜನ ಅಂತ ತಿಳಿದುಕೊಂಡವ ನಾನು. ಬೇಕಾದರೆ ಒಂದು ಪಾಯಸ ಇರಲಿ. ಯಾವುದಾದರೂ ಒಂದು ಸಿಹಿ ತಿಂಡಿ ಇರಲಿ. ಅದು ರಾಜ ಭಕ್ಷ್ಯವೇ ಆಗಬೇಕೆಂದೇನೂ ಇಲ್ಲ. ಆದರೆ ಇಂದಿನ ಊಟದಲ್ಲಿ ಇಷ್ಟು ಮಾತ್ರವೇ?


ಒಂದು ಸಾಧಾರಣ ಊಟವೆಂದರೂ ಎಲೆಯಲ್ಲಿ ಬೀಳುವ ವಸ್ತುಗಳು ಹತ್ತಾರು, ನೂರಾರು. ಉಪ್ಪು, ಎರಡು ಬಗೆಯ ಉಪ್ಪಿನಕಾಯಿ, ಎರಡು ಬಗೆಯ ಕೋಸಂಬರಿ, ಒಂದು ಚಟ್ನಿ, ಎರಡು ಮೂರು ಬಗೆಯ ಪಲ್ಯಗಳು, ಚಿತ್ರಾನ್ನ, ಹಣ್ಣು ಹಂಪಲು, ಸಪಾದ ಭಕ್ಷ್ಯ, ಪಂಚಕಜ್ಜಾಯ, ಅನ್ನ, ಅದರ ಮೇಲೆ ತುಪ್ಪ, ಎರಡು ಬಗೆಯ ತಂಬುಳಿ ತೊವ್ವೆ, ಸಾರು, ಎರಡು ಮೂರು ಬಗೆಯ ಹುಳಿ, ಮೆಣಸ್ಕಾಯಿ, ಅವಿಲು, ಪಂಚಭಕ್ಷ್ಯಗಳು, ಹೋಳಿಗೆ ಇರಬಹುದು, ಚಿರೋಟಿ ಇರಬಹುದು, ಫೇಣಿ ಇರಬಹುದು, ಲಾಡು ಇರಬಹುದು, ಜಿಲೇಬಿ ಜಹಾಂಗೀರು ಇರಬಹುದು, ಮೈಸೂರು ಪಾಕ್ ಇರಬಹುದು, ಸಾತ್ ಇರಬಹುದು, ಬಾಸುಂದಿ, ರಸಗುಲ್ಲಾ, ಜಾಮೂನು ಇರಬಹುದು, ಬಾದಾಮಿ ಹಲ್ವ ಇರಬಹುದು, ಕರದಂಟೂ ಇರಬಹುದು. ಅಂತೂ ಇವುಗಳಲ್ಲಿ ನಾಲ್ಕೈದು ಬಗೆಯಂತೂ ಇದ್ದೇ ಇರುತ್ತದೆ. ಎರಡು ಮೂರು ಬಗೆಯ ಪರಮಾನ್ನ, ಗೋಧಿ, ಪರಡಿ, ಹೆಸರು, ಖರ್ಜೂರ, ಬಾಳೆಹಣ್ಣು, ಅಪ್ಪಿ ಪಾಯಸ ಯಾವುದೂ ಇರಬಹುದು. ಇದರ ಮಧ್ಯದಲ್ಲಿ ವೆಜಿಟೇಬಲ್ ಪಲಾವ್, ಪೂರಿ, ಚಪಾತಿ, ಪತ್ರೊಡೆ, ಶ್ಯಾವಿಗೆ, ವಾಂಗಿಬಾತ್ ಯಾವುದೂ ಇರಬಹುದು. ಇವೆಲ್ಲವನ್ನು ಮಾಡಲು ಸಮಯ ಎಷ್ಟು ಬೇಕು. ಬಡಿಸಲು ಶ್ರಮವೆಷ್ಟು ತಿನ್ನಲು ಒದ್ದಾಟವೆಷ್ಟು! ಆಮೇಲಾದರೂ ಸುಖವುಂಟೆ? ಕಣ್ಣು ಎಳೆಯುತ್ತದೆ, ಹೊಟ್ಟೆ ಭಾರವಾಗುತ್ತದೆ, ಕಾಲು ಮುಂದೆ ಹೋಗಲು ಕೇಳದು. ಅಲ್ಲೇ ಎಲ್ಲಾದರೂ ಪವಡಿಸೋಣ ಅನಿಸೋದಿಲ್ಲವೇ? ಆಮೇಲೆ ಪುನಃ ಕಾಫಿಯೋ, ಟೀಯೋ, ಬೀಡಾವೋ ನಮ್ಮ ಹೊಟ್ಟೆ ಸೇರಲು ಕಾದಿರುತ್ತವೆ. ಇದರಲ್ಲಿ ಕೊಂಕಣಿಗರ ಊಟವೇ ಪರವಾಗಿಲ್ಲ. ದಾಳಿ ತೊವ್ವೆ, ಕಡ್ಲೆಗಶಿ, ಉಪ್ಪುಗರಿ, ಪಾಯಸ ಇಷ್ಟರಲ್ಲೇ ಮುಗಿಯುತ್ತದೆ. ಕೊನೆಗೊಂದು ಲೋಟ ಮಜ್ಜಿಗೆ ನೀರು ಅಥವಾ ನೀರು ಮಜ್ಜಿಗೆ.

ಸಾಮೂಹಿಕ ಅನ್ನಸಂತರ್ಪಣೆ, ಸಾಮೂಹಿಕ ಮದುವೆ, ಉಪನಯನ, ಸಾಹಿತ್ಯ ಸಮ್ಮೇಳನ, ಧಾರ್ಮಿಕ ಕೂಟ, ರಾಶಿ ಪೂಜೆ ಅಂತ ಸಾವಿರಾರು, ಲಕ್ಷದಷ್ಟು ಜನ ಉಂಡು ತಿಂದು ತೇಗಿ ಹೋಗುವುದನ್ನು ನೋಡುತ್ತಿದ್ದೇವೆ. ಉಡುಪಿ, ಧರ್ಮಸ್ಥಳ, ಸುಬ್ರಹ್ಮಣ್ಯ, ಕಟೀಲು, ಮಂತ್ರಾಲಯ, ವೀರಶೈವರ ಮಠಗಳು ಎಲ್ಲೆಂದರಲ್ಲಿ ಊಟ, ಊಟ, ಊಟ. ದವಸಧಾನ್ಯಗಳು ಸಮೃದ್ಧವಾಗಿ ದೊರೆಯುತ್ತಿರುವ ಈ ಕಾಲದಲ್ಲಿ ಇಂತಹ ಊಟಗಳಿಗೆ ಬರವೇ? ಇವಲ್ಲದೆ ಹೋಟೆಲ್ಲುಗಳಲ್ಲಿ, ಧರ್ಮಶಾಲೆಗಳಲ್ಲಿ, ಶಾಲೆಗಳಲ್ಲಿ ಬಿಸಿ ಬಿಸಿ ಊಟದ ಭರಾಟೆ ಇದ್ದದ್ದೇ. ಆಹಾ – ಭೋಜನವೇ ಭೋಜನ. ಬಹುಜನರ ಮೆಚ್ಚಿನ ಭೋಜನ.

ಮದುವೆ ಸಮಾರಂಭಗಳಲ್ಲಂತೂ ಆ ಕಡೆ ವಧೂವರರು ಮಾಲೆ ವಿನಿಮಯ ಮಾಡಿಕೊಂಡ ಕೂಡಲೇ ಭೋಜನಶಾಲೆಯತ್ತ ದೌಡು. ಬಫೆ ಬೇರೆ ಇರುತ್ತದೆ. ಅದರಲ್ಲಿ

ಉತ್ತರ ಭಾರತೀಯ, ಉತ್ತರೋತ್ತರ ಭಾರತೀಯ ಖಾದ್ಯಗಳೂ ಇರುತ್ತವೆ. ಕುಳಿತುಣ್ಣುವವಗೆ ಕುಡಿಕೆ ಹೊನ್ನು ಸಾಲದು ಎಂದು ನಿಂತೇ ಉಣ್ಣುವವರ ಸಂಖ್ಯೆಯೇ ಜಾಸ್ತಿ. ವಧು ಯಾರು, ವರ ಯಾರು ಎಂದು ತಿಳಿಯುವ ಗೋಜಿಗೂ ಹೋಗುವುದಿಲ್ಲ. ಉಪಸ್ಥಿತಿಯೇ ಉಡುಗೊರೆ ಎಂದಿರುವಾಗ ಆ ಕಷ್ಟ ಇರೋದಿಲ್ಲ. ಉಂಡಾದ ಮೇಲೆ ಕ್ಯೂ ನಿಲ್ಲಲು ಪುರುಸೊತ್ತಿದ್ದರೆ, ಸಹನೆ ಇದ್ದರೆ ವಧೂವರರ ಮುಂದೆ ನಿಂತು ಹಲ್ಲು ಕಿರಿದು, ಕೈ ಹಿಸುಕಿ ಆಶೀರ್ವಾದ ಮಾಡಿ ಫೋಟೋ ತೆಗಿಸಿಕೊಂಡು ಬರಬಹುದು. ಇಲ್ಲದಿದ್ದರೆ ಊಟಮಾಡಿ, ಕೈತೊಳೆದು, ಅಲ್ಲೇನಾದರೂ ತೊಟ್ಟೆ ಕೊಟ್ಟರೆ ಪಡೆದು ಬೀಡ ಜಗಿದು ಕಾರೋ ಬಸ್ಸೋ, ಮೋಟರ್ ಸೈಕಲ್ಲೋ ಏರಿದರೆ ಮದುವೆಗೆ ಅಟೆಂಡೆನ್ಸ್ ಹಾಕಿದಂತಾಯಿತು ಎಂದು ತಿಳಿಯುವವರೇ ಹೆಚ್ಚು.

ಊಟ ಮುಗಿಸಿ ಎದ್ದಾಗ ಆ ಎಂಜಲೆಗಳನ್ನು ನೋಡಬೇಕು. ರಾಮ, ರಾಮಾ. ಎಂಥಾ ವೇಸ್ಟ್, ಒಂದು ಹತ್ತು ಹದಿನೈದು ಖಾಲಿ ಎಲೆಗಳು ಕಾಣಸಿಗಬಹುದು. ತಿಂದದ್ದಕ್ಕಿಂತ ಬಿಸಾಡಿದ್ದೇ ಹೆಚ್ಚು. ಹಸಿದ ಎಷ್ಟು ಹೊಟ್ಟೆಗಳನ್ನು ಇದು ತಣಿಸಬಹುದಿತ್ತು. ಇದನ್ನು ನನ್ನಿಂದ ನೋಡಲಾಗದು. ಕಣ್ಣು ಮುಚ್ಚಿಕೊಂಡೇ ನನ್ನ ದಾರಿಯನ್ನು ನಾನು ಹಿಡಿಯುತ್ತೇನೆ. ನಾನಂತೂ ಎಲೆಗೆ ಹಾಕಿಸಿಕೊಂಡದ್ದನ್ನು ಯಾವುದನ್ನೂ ಬಿಡದೆ ತಿಂದು ತೃಪ್ತಿಯಿಂದ ತೇಗಿ 'ಅನ್ನದಾತಾ ಸುಖೀಭವಃ' ಎಂದು ಹೇಳಿಯೇ ಬರುತ್ತೇನೆ, ನೀವೇನೆನ್ನುವಿರೋ?



ಆಸ್ಪತ್ರೆಯಲ್ಲಿ

- ಓಂ ಪ್ರಕಾಶ್

ಆಸ್ಪತ್ರೆಯ ಆಪರೇಷನ್ ಥಿಯೇಟರ್‌ನಲ್ಲಿ ಕೆಲಸ ಮಾಡುವ ಅರಿವಳಿಕೆ ತಜ್ಞರು (Anesthetists) ಯಾವಾಗಲೂ Mask ಧರಿಸಿರುತ್ತಾರೆ. ನಾವು ಯಾವಾಗಲಾದರೂ O.T.ಗೆ ಹೋದಾಗ, ಅವರಲ್ಲಿ ಯಾರು ಯಾರು ಅಂತ ಗೊತ್ತಾಗೋದೇ ಇಲ್ಲ, ಆದರೆ ಅನೇಸ್‌ತೆ ಟಿಸ್ಟುಗಳಿಗೆ ಮಾತ್ರ, Mask ಇಲ್ಲದಿದ್ದರೆ ಅವರವರ ಗುರುತೇ ಸಿಗುಲ್ಲವಂತೆ!!

★★★

ಆತ ಟಿಬೆಟ್‌ನಿಂದ ಬಂದಿದ್ದ ಬೌದ್ಧ ಸನ್ಯಾಸಿ. ಅವನಿಗೆ ಶ್ವಾಸಕೋಶದಲ್ಲಿ ಒಂದು Cyst ಇತ್ತು. ಅದನ್ನ ಆಪರೇಷನ್ ಮಾಡಿ ತೆಗೆಯಬೇಕು ಅಂತ ಸಲಹೆ ಕೊಟ್ಟೆವು. ಅವನಿಗೆ ನಂ ಯಾವ ಭಾಷೆಯೂ ತಿಳಿಯದು. ನಾವೇನು ಹೇಳಿದರೂ ನಸುನಗುತ್ತಿದ್ದ. ಕೊನೆಗೆ ಒಬ್ಬ ಭಿಕ್ಷು ಬಂದು ನಮಗೆ ಸಹಾಯ ಮಾಡಿದ. ಆಪರೇಷನ್ ಆದ ಮೇಲೆ, ಸುಖವಾಗಿ ನಗುತ್ತ ಮಲಗಿದ್ದ! ನಮಗೆಲ್ಲ ಅಚ್ಚರಿ!! ಮೇಜರ್ ಆಪರೇಷನ್ ಆದಮೇಲೆ, ಅಸಾಧ್ಯ ನೋವಿರುತ್ತೆ! ಈತನಿಗೋ ನೋವಿನ ಇಂಜೆಕ್ಷನ್ ಕೂಡ ಬೇಕಾಗಿದ್ದಂತೆ ತೋರಲಿಲ್ಲ! ಬೆಳಗಾಗಿ ಎದ್ದು ನೋಡಿದರೆ, ಅವನು ಬೆಡ್‌ನಲ್ಲೇ ಇರಲಿಲ್ಲ! ಎಲ್ಲರಿಗೂ ಗಾಬರಿ!! ನೋಡಿದರೆ ವಾರ್ಡಿನ ಬಾಲ್ಕನಿಯಲ್ಲಿ ನಿಂತು ರಸ್ತೆಯ ಟ್ರಾಫಿಕ್ ನೋಡುತ್ತ ನಿಂತಿದ್ದ ಭೂಪ!! Interpreterನ ಕರೆಸಿ ಕೇಳಿದೆವು, ನಿನಗೇಕೆ ನೋವೇ ಆಗ್ತಿಲ್ಲವೇ ಅಂತ. ಅವನು ಹೇಳಿದ್ದು: "ನಿನಗೆ ಏನಾದರೂ ಆಪತ್ತು ಬಂದರೆ, ಬುದ್ಧಂ ಶರಣಂ ಅಂತ ಅಂತರಾಳದಿಂದ ಧ್ಯಾನಮಾಡು! ಮಹಾಕಾರುಣಿಕ ದಯಾಮಯಿ! ನಿನ್ನ ನೋವನ್ನು ನಿವಾರಿಸುತ್ತಾನೆ' ಅಂತ ನನ್ನ ಗುರು ಹೇಳಿದ್ದರು! ಅದನ್ನೇ ಪಾಲಿಸಿದೆ! "ವಿಜ್ಞಾನವನ್ನೂ ಮೀರಿದ ಈ ಸಂಗತಿ ನನ್ನ ಮನಸ್ಸನ್ನು ಈಗಲೂ ಕಾಡುತ್ತಿದೆ!

★★★

ನಂ ಆಸ್ಪತ್ರೆಯಲ್ಲಿ Outpatients ಇಲಾಖೇಲಿ ಬೆಳಗಾಗಿ ನೋಡಿದರೆ ಕ್ಯೂ ಇರುತ್ತೆ. ಒಂದು ದಿನ ಬೆಳಿಗ್ಗೆ ಒಬ್ಬರು ಧಡೂತಿ ಆಸಾಮಿ ಬಂದರು. ಕ್ಯೂ ನೋಡಿ ಅಸಂತೃಪ್ತರಾದರು. ಕ್ಯೂ ಜಂಪ್ ಮಾಡಲು ಪ್ರಯತ್ನಿಸಿದರು. ಜನರಿಗೆ ಕೋಪ ಬಂತು. 'ಯಾಕ್ರೀ, ಕ್ಯೂ ಕಾಣುಲ್ಲವೇ?' ಎಂದು ಆಗ್ರಹಿಸಿದರು. 'ನಾನು ಗ್ರಾಮೀಣ ಬ್ಯಾಂಕ್ President!' ಅಂತ ದರ್ಪದಿಂದ ಹೇಳಿದರು. ಒಬ್ಬನಿಗೆ ರೇಗಿತು. "ನೀವು ಕಿಲೋ ಗ್ರಾಮೀಣ ಬ್ಯಾಂಕ್ ಅಧ್ಯಕ್ಷರಾದರೂ ಕ್ಯೂನಲ್ಲೇ ಬರಬೇಕು" ಅಂತ ಗುಡುಗಿದ. ನಗೆಯ ಕಿಡಿ ಹಾರಿತು!!

ಎಮ್ಮ ಮನೆಯಂಗಳದಿ....

- ಅರುಣಾ ಆರ್. ಕಾರಂತ

"ನಿನ್ನ ವಯಸ್ಸಿಗೆ ನನಗಾಗ್ಲೇ ಮದುವೆಯಾಗಿತ್ತು ಕಣೇ ನೀನ್ ನೋಡಿದ್ರೆ ಇನ್ನೂ ಸಣ್ಣ ಮಗುವಿನ ಹಾಗೆ ಪೇಽ ಪೇಽ ಅಂತ ಅಪ್ಪನ ಹಿಂದೆ ಓಡಾಡ್ತಿದ್ದಿ. ಮುಂದಕ್ಕೆ ಓದಬೇಕೂಂತಿದ್ರೆ, ಮನೆ, ಅಪ್ಪ ಅಣ್ಣ ಎಲ್ಲರನ್ನೂ ಬಿಟ್ಟಿರಬೇಕು. ಮನೆ ನೆನಪಾಗ್ತದೆ ನಿಮ್ಮೆಲ್ಲರ ನೆನಪಾಗ್ತದೆ ಅಂದ್ರೆ ಹೇಗೆ? ಓದ್ಲಿಕ್ಕೆ ಹೋಗಿದ್ದಿ ಅನ್ನೋದು ನೆನಪಿರಲಿ. ಮೊಲ್ಲು ಓದು, ಚೆನ್ನಾಗಿ ಓದಿ ಒಳ್ಳೆ ಮಾರ್ಕ್ಸ್ ತಗೊಂಡ್ರೆ ಯಾರಾದ್ರು ಕರ್ದು ಕೆಲ್ಸ ಕೊಡ್ತಾರೆ. ಒಳ್ಳೆ ನೌಕ್ರಿಂದ್ರೆ ಒಳ್ಳೆ ಸಂಬಂಧ ತಾನಾಗೇ ಹುಡ್ಕೊಂಡು ಬರ್ತದೆ. ಅದು ಬಿಟ್ಟು 'ನಾ ಮನೆಗೆ ಬತ್ತೆಽ' ಅಂತ ರಾಗ ಎಳದ್ರೆ ನೀನು ನಾಳೆಯಿಂದ ಕಾಲೇಜಿಗೆ ಹೋಗೋದು ಬೇಡ, ಮನೆಯಲ್ಲಿ ಇದ್ದುಬಿಡು" ಅಂತ ನನ್ನವಳು ಒಂದೇ ಉಸಿರಿಗೆ ಫೋನಿನಲ್ಲಿ ಹೇಳಿ ಫೋನು ಇಡ್ಬೇಕು ಅನ್ನೋದ್ರೊಳಗೆ ನನ್ನ ಮಳು 'ಒಂದ್ನಿಮಿಷ ಅಪ್ಪಂಗೆ ಕೊಡು' ಅಂದಿದ್ದಕ್ಕೆ ನನ್ನ ಕೈಗೆ ಫೋನು ಬಂತು, "ಅಪ್ಪಾ.... ಅಂತ ಅಳ್ಲಿಕ್ಕೆ ಶುರು ಮಾಡಿದ್ಲು...." ಪುಟ್ಟಿ ಹಾಗೆಲ್ಲ ಅಳಕೂಡ್ದು ಏನೂ ಯೋಚನೆ ಮಾಡ್ಬೇಡ ಒಂದು ನಾಲ್ಕು ದಿನ ಅಷ್ಟೇ. ಸರಿಯಾಗಿ ಕ್ಲಾಸು ನಡ್ದು ಅಭ್ಯಾಸದ ಒತ್ತಡ ಬಿದ್ದಾಗ ನಿಂಗೆ ಬೇರೆ ಯೋಚ್ನೆ ಮಾಡ್ಲಿಕ್ಕೂ ಪುರಸತ್ತಿರಲ್ಲ. ಈಗ ಪಾಠ ಸರಿಯಾಗಿ ಶುರುವಾಗಿಲ್ಲ ಟೆಕ್ಸ್ಟ್‌ಬುಕ್ಕು ಕೈಯಲ್ಲಿಲ್ಲ ಕಾಲೇಜು ಬಿಟ್ಟು ಹಾಸ್ಟೆಲ್ ರೂಮ್‌ಗೆ ಬಂದ್ರೆ ಅಷ್ಟಾಗಿ ಅಲ್ಲೂ ಯಾರದ್ದೂ ಕ್ಲೋಸ್ ಪರಿಚಯವಾಗಿರದ ಕಾರಣ ಬರೀ ಹಾಯ್, ಬಾಯ್‌ನಲ್ಲಿಯೇ ಸರಿದು ಹೋಗ್ತಾರೆ. ನಿನ್ನ ಹಾಗೇ ಉಳಿದ ಹೆಣ್ಣುಮಕ್ಕಳೂ ಹಾಗೇ ಅಲ್ವೇ? ನೀನು ಸ್ಮೈಲ್ (smile) ಕೊಟ್ಟರೇ ಅವರೂ ಮಾತಾಡ್ತಾರೆ ಇಲ್ದೇ ಇದ್ರೆ ಯಾರೂ ನಿನ್ನತ್ರ ಮಾತಾಡಲ್ಲ ಅನ್ಸತ್ತೆ ನೋಡು, ಹೊಸ ಪರಿಸರ.... ಇನ್ನೊಂದೆರಡು ದಿವ್ಸದಲ್ಲಿ ಎಲ್ಲ ಸರಿಹೋಗುತ್ತೆ ನೋಡು, ಸರಿಯಾಗಿ ಊಟ ಮಾಡು, ನಿದ್ದೆ ಮಾಡು ಗುಡ್ ನೈಟ್" ಅಂತ ಹೇಳಿದೆ. ಮಗಳು ಮನಸ್ಸಿಲ್ಲದ ಮನಸ್ಸಿನಿಂದ ಫೋನಿರಿಸಿದಳು.

ಹುಟ್ಟಿ ಹದಿನೆಂಟು ವರ್ಷವಾದ್ರೂ ಅಪ್ಪ ಅಮ್ಮನ್ನ ಬಿಟ್ಟು ಎಲ್ಲಿಯೂ ಒಂದು ರಾತ್ರಿಯೂ ಮನೆ ಬಿಟ್ಟು ಗೊತ್ತಿಲ್ಲ ಅವಳಿಗೆ. ಮೊದ್ಲು ಅವ್ವ ಸಣ್ಣವ್ವ ಅಂತ, ನಂತ್ರ ಶಾಲೆ, ಟ್ಯೂಷನ್ ಅಂತ, ರಜೆಯಲ್ಲಿ ಮೊದಲರ್ಧ ಭಾಗ ಯಾರ್‍ಯಾರೋ ರೊಕ್ಕ ಇಸ್ಕೊಂಡು ನಡೆಸುವ ತರಬೇತಿ ಶಿಬಿರ, ಪಿಕ್‌ನಿಕ್ಕು, ಅದು ಇದೂ ಅಂತ. ನಂತ್ರ ಅಲ್ಲಿ ಸುಸ್ತಾದ್ದು ಇಲ್ಲಿ ಮನೆಯಲ್ಲಿ ಬಂದು ರೆಸ್ಟು ಅಂತ ಕಾಲುಚಾಚಿ ಮಲಗಿದ್ದು. ಇದು ಬಿಟ್ರೆ ನೆಂಟರು, ಸ್ನೇಹಿತರು ಅಂತ ಎಲ್ಲೂ ಹೊರಗೆ ಬೀಳ್ಲಿಲ್ಲ. ಅದೇನೋ ಹೇಳ್ತಾರಲ್ಲ "ಅಪ್ಪನ ಜೊತೆ ಬೊಜ್ಜಕ್ಕೆ ಹೋಗ್ಲಿಲ್ಲ, ಅಮ್ಮನ ಜೊತೆ ಮದ್ವೆಗೆ ಹೋಗ್ಲಿಲ್ಲ" ಅಂತ, ಮನೆ ಬಿಟ್ಟು ಇರೋದಂದ್ರೆ ಯಮಶಿಕ್ಷೆ ಅಂತ ತಿಳ್ಕೊಂತಾಳೆ ನನ್ಮಗಳು. ಈಗ ಅನಿವಾರ್ಯವಾಗಿ ಕಾಲೇಜು ಶಿಕ್ಷಣಕ್ಕಂತ ದೂರದ ಜಿಲ್ಲಾ ಕೇಂದ್ರಕ್ಕೆ ಸೇರಿಸಬೇಕಾಗಿದೆ. ಅಲ್ಲಿಗೆ ಹೋದ ಹೊಸತು ನನ್ನ ಮಗಳ ಫೋನ್ ಪ್ರಲಾಪಕ್ಕೆ ಅಮ್ಮನ

ಉಪದೇಶ, ನನ್ನ ಹೂ-ಮಾತಿನ ಸಾಂತ್ವನ. ಹೀಗಾಗಿ ನನ್ನವಳು ಯಾವಾಗ್ಲೂ ಹೇಳ್ತಿರ್ತಾಳೆ, 'ಮಕ್ಕಳು ಫೋನು ಮಾಡ್ತಾರೆ ನಾನು ಮಾತಾಡ್ತಿದ್ದ ಹಾಗೇ ಅಪ್ಪಂಗೆ ಕೊಡು ಅಂತಾರೆ ನಿಮ್ಮೆ ಚಾನ್ಸೇ ಚಾನ್ಸು' ಅಂತ. ಅದಕ್ಕೆ ನಾನು "ಹೌದು ಈ ಕಾಲದಲ್ಲಿ ಅಮ್ಮ ಅಪ್ಪ ಆಗಿದ್ದಾಳೆ. ಅಪ್ಪ ಅಮ್ಮನಾಗಿದ್ದಾನೆ. ಒಳಗೂ ಹೊರಗೂ ಸಂಸಾರ ರಥ ಸುಗಮವಾಗಿ ನಡೀಬೇಕಲ್ಲ ಮತ್ತೆ!' ಎಂದು ಅಣಕಿಸುತ್ತೇನೆ. ಇರಲಿ.

ಮಗಳೊಂದಿಗಿನ ಟೆಲಿ-ಸಂಭಾಷಣೆ ಮುಗಿದ ನಂತರ ನನ್ನವಳಿಗೆ ಹೇಳಿದೆ. ನೋಡು ಎಲ್ಲದಕ್ಕೂ ನೀನು ಅವಳೊಂದಿಗೆ ಹೋಲಿಸ್ಕೋಬೇಡ. ಆ ಕಾಲ ಹಾಗಿತ್ತು. ಈಗ ಹೆಣ್ಣು ಗಂಡು ಎರಡೂ ಅಷ್ಟೇ. ಆಯಾ ವಯಸ್ಸಿಗೆ ತಕ್ಕ ಹಾಗೆ ದೇಹವೇನೋ ಬೆಳ್ದಿರ್ತದೆ. ಆದರೆ ಬುದ್ಧಿ ಬೆಳ್ದಿರೋದಿಲ್ಲ, ಜವಾಬ್ದಾರಿ ಬಂದಿರೋದಿಲ್ಲ. ಈಗಿನ ಶಿಕ್ಷಣ ಪದ್ಧತಿ, ಕುಟುಂಬ ಪದ್ಧತಿ, ಸುತ್ತಲಿನ ಪರಿಸರ ಎಲ್ಲ ಮನುಷ್ಯನ್ನ ಸಂತೆಯೊಳಗಿದ್ರೂ ಒಂಟಿಯಾಗಿರಸ್ತರೆ "ತಿಳ್ದವ್ರು" ಅನ್ಕೊಂಡವ್ರು ಹೇಳ್ತಾರೆ - "ಪ್ರಪಂಚ ಕಿರಿದಾಗಿದೆ" ಅಂತ ಇರಬಹುದು... ದೂರವಾಣಿ, ಚಲನವಾಣಿ, ಲಿಖಿತವಾಣಿ, ಐನೆಟ್, ಇ-ಮೇಲ್ ಎಲ್ಲ ಬಂದು ಒಬ್ರನ್ನೊಬ್ಬರು ಬೇಗ ಸಂಪರ್ಕಿಸಬಹುದೇನೋ ಸರಿ. ಆದರೆ ಸಂಪರ್ಕಿಸೋದು ಯಾರನ್ನ ಅನ್ನೋದೇ ಸಮಸ್ಯೆ ಎಲ್ಲರಿಗೂ ಅವರವರ ಗಂಡ, ಮಕ್ಕಳು, ಮನೆ, ಉದ್ಯೋಗ ಅನ್ನೋದು ಬಿಟ್ಟರೆ ಅದರಾಚೆ ಇನ್ನೊಂದು ಪ್ರಪಂಚ ಇದೆ ತನಗೂ ಜನ್ಮಕೊಟ್ಟ ಅಪ್ಪ ಅಮ್ಮ ಇನ್ನೂ ಇದ್ದಾರೆ. ತನ್ನ ತಮ್ಮ, ತಂಗಿ, ಅಣ್ಣ ಅಕ್ಕ, ಅತ್ತೆ, ಮಾವ ಬಂಧು ಬಳಗ, ಹೀಗೆ ಕಳ್ಳು - ಬಳ್ಳಿ, ಸ್ನೇಹಿತರು, ಸುತ್ತಲಿನ ಸಮಾಜ, ಇವುಗಳ ಬಗ್ಗೆ ಕಿಂಚಿತ್ತೂ ಯೋಚಿಸ್ಲಿಕ್ಕೆ ಪುರಸತ್ತಿದೆಯೇ? ಹೀಗಂದೆ ಅಂತ ತಪ್ಪು ತಿಳೀಬೇಡ. ನಾನು ಊರಿಗೆ ಹೋಗ್ದೆ ಎಷ್ಟು ದಿವ್ಸಾಯ್ತು? ಇನ್ನು ಅಲ್ಲಿಯೂ ಅಷ್ಟೆ ಅವ್ರಿಗೆ ಅವ್ರ ಪ್ರಪಂಚದ ಹೊರಗೆ ಬೇರೇನೂ ಕಾಣಿಸೋದೇ ಇಲ್ಲ, ಯಾರೂ ಯಾರನ್ನೂ ದೂರುವ ಹಾಗೇ ಇಲ್ಲ ಎಂದು ನಿಟ್ಟುಸಿರಿಟ್ಟು "ಹೀಗಿರುವಾಗ ಅಪ್ಪ ಅಮ್ಮನ್ನ ಬಿಟ್ಟು ಬೇರೆಯವರ ಜೊತೆ ಒಂದು ದಿನವೂ ಕಳೆಯದ ನಿನ್ನ ಮಗಳಿಗೆ ವಯಸ್ಸು ಹದಿನೆಂಟಾದರೇನು. ಇಪ್ಪತ್ತಾದರೇನು? ಮೊದಲ ಬಾರಿ ಮನೆ ಬಿಟ್ಟು ಇದ್ದಾಳೆ ಅಳುವುದು ಸಹಜ. ಅವಳಿಗೆ ಧೈರ್ಯ ಹೇಳಿ ಸಮಾಧಾನದ ಮಾತಾಡೋದು ಬಿಟ್ಟು ಗದರಿಸಿದರೆ ಹೇಗೆ?" ಎಂದೆ.

ಮತ್ತೆರಡು ದಿವ್ಸಕ್ಕೆ ಮತ್ತೆ ಮಗಳು ಫೋನ್ ಮಾಡಿದ್ಲು. ಈ ಬಾರಿ ದನಿಯಲ್ಲಿ ಮಾರ್ದವತೆ ಇದ್ರೂ ಗೊಂದಲವಿರಲಿಲ್ಲ, ತಕ್ಷಣ ನೆನಪಾಯ್ತು ಕೆ.ಎಸ್.ಎನ್.ರ "ಮೊದಲಿನ ಮೌನ..." ಹಾಡು. "ಅಪ್ಪ ಅಪ್ಪ ಇವತ್ತು ಕ್ಲಾಸ್‌ನಲ್ಲಿ ಏನಾಯ್ತು ಗೊತ್ತಾ? ಕೆಮಿಸ್ಟ್ರಿ ಲೆಕ್ಚರರು ಒಂದು ಪ್ರಶ್ನೆ ಕೇಳಿದ್ರು, ಯಾರಿಗೂ ಉತ್ರ ಗೊತ್ತಿರ್ಲಿಲ್ಲ. ನಾನು ಹೇಳ್ದೆ. ಅವರು 'ಗುಡ್' ಅಂದ್ರು. ನಂಗೆ ಉತ್ರ ಗೊತ್ತಿದ್ರು ಹೇಳ್ಬೇಕು ಅನ್ನೋದ್ರಲ್ಲಿ ಬೇರೆ ಯಾರಾದ್ರೂ ಹೇಳಿದ್ರೆ ಅಂತ ಹೆದ್ರಿಕೆ. ಜತೆಯಲ್ಲಿ ಇಂಗ್ಲೀಷಿನಲ್ಲಿ ಸರಿಯಾಗಿ ಹೇಳ್ಲಿಕ್ಕಾಗ್ದಿದ್ರೆ ಅಂತ ಎದೆ ಡವಡವ ಅಂತಿತ್ತು ಗೊತ್ತಾ? ಆದ್ರೂ ಧೈರ್ಯ ಮಾಡಿ ಕೈಯೆತ್ತಿದೆ. ಉತ್ರ ಹೇಳಿದ್ದಕ್ಕೆ ಲೆಕ್ಚರರು ನನ್ನ ಹೆಸ್ರು ಎಲ್ಲಿಂದ ಬಂದಿದ್ದು ಅಂತೆಲ್ಲ ಕೇಳಿದಾಗ ಎಷ್ಟೊಂದು ಖುಷಿಯಾಯ್ತು ಗೊತ್ತಾ? ಆಗ ಅಪ್ಪ ನಂಗೆ ನಿನ್ನ ನೆನಪಾಯ್ತು ಗೊತ್ತಾ? ಇದಾದ ಮೇಲೆ ಆವತ್ತು ನೀನು ಹಾಸ್ಟೆಲಿಗೆ ಸೇರಿಸಲಿಕ್ಕೆ ಬಂದಾಗ

ಇಷ್ಟೆಲ್ಲ ರಾಧಿಕಾ ಅಂತ ಭಾರಿ ಜಂಬ ಮಾಡ್ತಿದ್ಲಲ್ಲ, ಅವಳೇ ನನ್ನ ಹತ್ರ ಬಂದು ಖುಷಿಯಿಂದ ಮಾತಾಡ್ತಿದ್ಲು ಗೊತ್ತಾ ಎಂದು ಗಳಪಿದಾಗ ''ವೆರಿಗುಡ್ ಕೀಪ್ ಇಟ್ ಅಪ್'' ಅಂತ ಹೇಳಿದೆ.

ಮತ್ತೆರಡು ವಾರದ ನಂತರದಲ್ಲಿ ಮಗಳ ಫೋನು, ''ಅಪ್ಪ ಈಗ ಇಲ್ಲೇನು ತೊಂದ್ರೆ ಇಲ್ಲ. ನಾನು ಕಾಲೇಜಿನಲ್ಲಿ ಇದ್ದಷ್ಟು ಹೊತ್ತು ಎಲ್ಲ ಮರ್ತು ಖುಷಿಯಾಗೇ ಇರ್ತೇನೆ. ಆದ್ರೂ... ಹಾಗೆ ಖುಷಿಯಾಗಿರೋದು ತಪ್ಪಾ...? ಮತ್ತೆ ಅಳುವಂತಾದ್ರೆ ಅಂತ ಹೆದರಿಕೆ... ಕೆಲವು ಸಲ ನಾನು ನನ್ನ ಅಭ್ಯಾಸದಲ್ಲಿ ಮುಳುಗಿದ್ದು ನಿಮ್ಮನ್ನೆಲ್ಲ ಮರೆತಿದ್ದೇನೇನೂ ಅನ್ಸುತ್ತೆ. ಹಾಗೇನಿಲ್ಲ ಅಲ್ಲ ಅಪ್ಪ? ಅಪ್ಪ ನಿಂಗೆ ಬೇಸರ ಇಲ್ಲ ಅಲ್ಲ ಅಪ್ಪ. ನಂಗೆ ಮೇಲಿಂದ ಮೇಲೆ ಫೋನು ಮಾಡ್ಲಿಕ್ಕೆ ಆಗದಿದ್ರೆ ಬೇಸರ ಮಾಡ್ಕೋಬೇಡ. ಇನ್ನು ಹದಿನೈದು ದಿನಕ್ಕೆ ಕ್ಲಾಸ್ ಟೆಸ್ಟ್ ಇದೆ' ಅಂತಾ ರಾಗ ಎಳೀತಾಳೆ. ಅದೂSS ಅಪ್ಪ, ಹಾಸ್ಟೆಲ್‌ನಲ್ಲಿ ನಮ್ಮ ಎದ್ರುಗಡೆ ರೂಂನಲ್ಲಿ ಒಬ್ಳು ರಾತ್ರಿ 10ರ ತನಕ ಮಾತಾಡ್ತಿರ್ತಾಳೆ ಮತ್ತೆ ರಾತ್ರಿ ಒಂದು ಒಂದೂವರೆ ತನಕ ಎಚ್ಚರಿರ್ತಾ ಓದ್ತಾಳೆ. ಮತ್ತೆ ಬೆಳಿಗ್ಗೆ 9ರ ತನಕ ನಿದ್ರೆ ಮಾಡ್ತಾಳೆ ಅದ್ರಿಂದ ಅವ್ಳ ರೂಮ್‌ಮೇಟ್‌ಗೆ, ಅಕ್ಕಪಕ್ಕದವರಿಗೆ ಎಷ್ಟು ತೊಂದ್ರೆ ಆಗುತ್ತೆ ಅಂತ ಯೋಚಿಸುವುದೇ ಇಲ್ಲ...' ಅದ್ಕೆ ನಾನಂದೆ ''ಹೋಗ್ಲಿ ಬಿಡು, ಅಂಥ ಸಣ್ಣ ವಿಷಯಕ್ಕೆಲ್ಲ ತಲೆ ಕೆಡಿಸ್ಕೋಬೇಡ. ಐದು ಬೆರಳೂ ಒಂದೇ ಸಮ ಇರಲ್ಲ, ಒಬ್ಬೊಬ್ರು ಒಂದೊಂದು ಥರ ಇರ್ತಾರೆ. ಮತ್ತೊಬ್ಬರಲ್ಲಿ ತಪ್ಪು ಕಾಣ್ತ ಹೋದ್ರೆ ಬರೀ ತಪ್ಪೇ ಕಾಣಿಸ್ತದೆ. ಹಾಗೆಲ್ಲ ಯೋಚಿಸೋದು ಬಿಟ್ಟು ನಿನ್ನ ಅಭ್ಯಾಸದ ಕಡೆಗೆ ಲಕ್ಷ್ಯ ಕೊಡು. ತಾಳ್ಮೆ ಇರಲಿ ಅಸಹನೆ ಬೇಡ. ಜೀವನದ ಪಾಠಶಾಲೆಯಲ್ಲಿ ಯಾರೊಬ್ಬರ ಸಿಲೆಬಸ್ಸು ಒಂದೇ ಇರಲ್ಲ, ಆದ್ರೆ ಎಲ್ಲರಿಗೂ ಒಂದು ಸಾಮಾನ್ಯ ವಿಷಯ ಇರತ್ತೆ... ನಿಮ್ಗೆ ಈಗ ''ಪರಿಸರ ವಿಜ್ಞಾನ'' ಅಂತ ಇದ್ದ ಹಾಗೆ. ಅದಂದ್ರೆ ''ತಾಳ್ಮೆ'' ''ಸಹನೆ'' ಅಂತ ಅದನ್ನು ಬೆಳೆಸಿಕೊಂಡರೆ ನೀನು ಎಲ್ಲಿದ್ರೂ ಗೆದ್ದು ಬರ್ತೀಯ, ತಾಳ್ಮೆ ಇರಲಿ ಪುಟ್ಟೀ. 'ಬೆಸ್ಟ್ ಆಫ್ ಲಕ್' ಎಂದು ಹೇಳಿ ಫೋನಿರಿಸಿದೆ.

ಇಂತಹ ನೂರಾರು ಕರೆಗಳು ಕರಕರೆಗಳು ಈ ಮೂರುವರೆ ವರ್ಷದಲ್ಲಿ ನನ್ನ ಮಗಳಿಂದ ಬಂದಿವೆ, ಇದರಿಂದಾಗಿ ನಾನು ಬೆಳೆದಿದ್ದೇನೋ, ನನ್ನ ಮಗಳು ಬೆಳೆದಿದ್ದಾಳೋ ತಿಳಿಯದು. ನಮ್ಮ ತಂದೆ-ತಾಯಿ ಮಗಳ ಸಂವಾದಗಳಲ್ಲಿ ಸಾಧ್ಯವಾದಷ್ಟು ಅವಳಿಗೆ ನೈತಿಕವಾಗಿ ಧೈರ್ಯ ತುಂಬುವ, ಬದುಕಿನ ವಾಸ್ತವತೆಯನ್ನು ಯಥಾವತ್ತಾಗಿ ಸ್ವೀಕರಿಸುವ ಬಗೆಯನ್ನು ಅರಹುವ, ಇತರರಲ್ಲಿ ಅಸಹನೆಯನ್ನು ತೋರದೆ ಸಾಧ್ಯವಾದಷ್ಟು ತನ್ನಂತೆ ಇತರರನ್ನು ತಿಳಿಯುವಂತೆ ಮಾಡುವ ಪ್ರಯತ್ನವನ್ನು ಮಾಡಿದ್ದೇವೆ. ಇದು ಆಕೆಯಲ್ಲಿ ಎಷ್ಟರ ಮಟ್ಟಿಗೆ ಫಲಿತವಾಗಿದೆಯೋ ತಿಳಿಯದು ಆದರೆ ಮಾನಸಿಕವಾಗಿ ಗಟ್ಟಿಯಾಗಿದ್ದು ಸದಾ ನಿರ್ಮಲಚಿತ್ತಳಾಗಿದ್ದು, ಸ್ನೇಹಪರಳಾಗಿ, ಹಸನ್ಮುಖಿಯಾಗಿರುವುದನ್ನು ಗಮನಿಸಿದ್ದೇವೆ.

ಈಗ ಕಾಲೇಜು ಶಿಕ್ಷಣ ಕೊನೆಯ ಹಂತದಲ್ಲಿದ್ದಾಗ ಈಗಲೂ ಫೋನಿನಲ್ಲಿ 'ಅಪ್ಪ ಅಪ್ಪಾ... ಎಂದು ಮಗುವಿನಂತೆ ನನ್ನ ಮಗಳು ಉಲಿಯುವಾಗ ತಂದೆ-ತಾಯಿಯಾದವರಿಗೆ ಇದಕ್ಕಿಂತ ಹೆಚ್ಚಿನ ಭಾಗ್ಯ ಇನ್ನೇನು ಬೇಕು ಎಂದೆನ್ನಿಸುತ್ತದೆ.

ಯುಗಾದಿಯ ನಿರ್ಣಯ

- ನಿರುಪಮಾ

ನಾವು (ಎಂದರೆ ನಮ್ಮ ಸಂಸಾರದ ಸದಸ್ಯರು) ಪ್ರತಿ ವರುಷ 'ಉಗಾದಿ'ಯ ದಿನದಂದು ಒಂದು ನಿರ್ಣಯ ತೆಗೆದುಕೊಳ್ಳುವುದನ್ನು ಪದ್ಧತಿ ಮಾಡಿಕೊಂಡಿದ್ದೆವು. ಹೋದ ವರುಷ ಯಾವ ಕಾರಣಕ್ಕೂ ಸುಳ್ಳು ಹೇಳಬಾರದು (ನಮ್ಮ ಮಕ್ಕಳಿಗೆ ಒಳ್ಳೆಯ ಅಭ್ಯಾಸ ಮಾಡಿಸುವ ದೃಷ್ಟಿಯಿಂದ) ಆಚೆ ವರುಷ ಯಾರಿಗೂ ಕೆಟ್ಟ ಮಾತುಗಳನ್ನಾಡಬಾರದು. ಹೀಗೆ ಯಾವುದಾದರೊಂದು ನಿರ್ಣಯ ಕೈಕೊಂಡು ವರುಷ ಪೂರ್ತಿ ಆದಷ್ಟು ಮಟ್ಟಿಗೆ ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದ್ದೆವು. ಆದರೆ ಈ ವರುಷ ನಾವು ಕೈಕೊಂಡ ನಿರ್ಣಯ ಕೇವಲ ಮೂರೇ ತಿಂಗಳಲ್ಲಿ ಮುರಿದು ಬಿತ್ತು. ನೆರೆಹೊರೆಯವರ ದೃಷ್ಟಿಯಲ್ಲಿ ನಮ್ಮ ಬಗೆಗಿನ ಅವರ ನಿರ್ಣಯವೇ ಬೇರೆಯಾಗಿತ್ತು. ಈ ಸಲದ 'ಯುಗಾದಿಯ ನಿರ್ಣಯ'ದ ಫಜೀತಿ ಕೇಳಿ.

ಈ ಸಲದ ಅಂದರೆ ಹೋದ ವರುಷದ ಯುಗಾದಿಯ ದಿನದಂದು ನಾವು ಬಹಳಷ್ಟು ಯೋಚಿಸಿ ನಿರ್ಣಯವೊಂದನ್ನು ಕೈಕೊಂಡಿದ್ದೆವು. ಪ್ರತಿ ಸಲವೂ ನಮ್ಮ ನಿರ್ಧಾರ ಕೇವಲ ನಮ್ಮ ಸಂಸಾರಕ್ಕಷ್ಟೆ ಸೀಮಿತವಾಗಿರುತ್ತಿತ್ತು. ಈ ಸಲ ನಮ್ಮಿಂದ ಬೇರೆಯವರಿಗೂ ಏನಾದರೂ ಉಪಕಾರವಾಗಲಿ ಎಂಬ ದೃಷ್ಟಿಯಿಂದ 'ಪರೋಪಕಾರ' ಮಾಡುವ ನಿರ್ಣಯವೊಂದನ್ನು ಮಂಡಿಸಿದಾಗ, ಆ ನಿರ್ಣಯ ಸರ್ವಾನುಮತದಿಂದ (ನಾವಿಬ್ಬರು ನಮ್ಮ ಮೂವರು ಮಕ್ಕಳು) ಅಂಗೀಕೃತವಾಯಿತು.

ಆ ಸಲದ ಯುಗಾದಿಯಾದ ಒಂದು ವಾರದ ನಂತರ ಒಂದು ದಿನ ನನ್ನ ಪತಿರಾಯರು ಆಫೀಸಿನಿಂದ ಮಾಮೂಲಾಗಿ ಬರುವ ಹೊತ್ತಿಗಿಂತ ಸ್ವಲ್ಪ ತಡವಾಗಿಯೇ ಮನೆಗೆ ಬಂದರು. ಬಹುಶಃ ಆಫೀಸಿನ ಕೆಲಸ ಹೆಚ್ಚಾಗಿದ್ದಿತ್ತೇನೋ ಎಂದುಕೊಂಡೆ. ಅವರು ಮನೆಗೆ ಬಂದವರೇ ಕೈಕಾಲು ತೊಳೆದು ಕಾಫಿ ತಿಂಡಿ ಮುಗಿಸಿ "ಪದ್ದೂ, ಇವೊತ್ತು ನಾವು ತೊಗೊಂಡ ಉಗಾದಿ ನಿರ್ಣಯವನ್ನು ಕಾರ್ಯರೂಪಕ್ಕೆ ತಂದೇಬಿಟ್ಟೆ ಕಣೇ!" ಎಂದರು. ನಾನು ಕುತೂಹಲದಿಂದ "ಏನು ಮಾಡಿದಿರಿ?" ಎಂದು ಕೇಳಿದೆ.

"ಪಾಪ, ಒಂದು ಹುಡುಗ, ಅದಕ್ಕೆ ನಾಲ್ಕೈದು ವರುಷವಿರಬಹುದು. ಈ ಬೀದಿ ಮೂಲೇಲಿ ತುಳಸಿ ಸ್ಟೋರ್ಸ್ ಇದೆಯಲ್ಲ, ಅದರ ಹತ್ರ ಲೈಟ್ ಕಂಬಕ್ಕೆ ಒರಗಿಕೊಂಡು ಅಳ್ತಾ ನಿಂತಿತ್ತು. ಆ ಹುಡುಗನ ಹೆಸರು ಕೇಳಿದೆ ಹೇಳ್ಳಿಲ್ಲ, ಯಾರ ಮನೆ ಹುಡುಗನಪ್ಪಾ? ಅಂತ ಕೇಳಿದ, ಅದಕ್ಕೂ ಉತ್ತರವಿಲ್ಲ, ಅವನ ಕಡೆಯವ್ರು ಯಾರಾದರೂ ಬರ್‍ತಾರೇನೋ ಅಂತ ಸುತ್ತಮುತ್ತ ನೋಡಿದೆ. ಯಾರೂ ಕಾಣಿಸಲಿಲ್ಲ, ಪಾಪ! ಯಾವುದೋ ಹುಡುಗ ದಾರಿ ತಪ್ಪಿ ಅಲ್ಲಿಗೆ ಬಂದಿರಬಹುದೂಂತ ಅವನನ್ನ ಕರೆದುಕೊಂಡು ಹೋಗಿ ಪೋಲೀಸ್ ಸ್ಟೇಷನ್‌ಗೆ ಬಿಟ್ಟು ಬಂದೆ. ಅವನ ಕಡೆಯವರನ್ನ ಪತ್ತೆಮಾಡಿ ಅವರಿಗೆ ಒಪ್ಪಿಸಿ ಎಂದು ಒತ್ತಾಯಿಸಿ ಹೇಳಿ ಬಂದೆ. ಪಾಪ! ದಾರಿಯುದ್ದಕ್ಕೂ ಆ ಹುಡುಗ ಅಳ್ತಾನೇ ಇತ್ತು." ಎಂದರು.

''ಅಲ್ರೀ, ನಾಲ್ಕೈದು ವರುಷದ ಹುಡುಗಾಂತೀರಿ. ಪೋಲೀಸ್ ಸ್ಟೇಷನ್ ಇಲ್ಲೆಲ್ಲಿದೆ? ಎರಡೂವರೆ ಕಿಲೋಮೀಟರ್ ಅವನನ್ನು ನಡೆಸಿಕೊಂಡು ಹೋದ್ರಾ?''

''ನಾನ್ಯಾಕೆ ನಡೆಸಿಕೊಂಡು ಹೋಗಲೇ? ಸ್ಕೂಟರ್ ಮನೇಲೆ ಬಿಟ್ಟು ಹೋಗಿದ್ನಲ್ಲ. ಆಟೋ ಮಾಡಿಕೊಂಡು, ಆ ಹುಡುಗನ ಮನೆಯವ್ರು ಬರೋತನಕ ಚೆನ್ನಾಗಿ ನೋಡಿಕೊಳ್ಳೀಂತ ಪೋಲೀಸಿನೋರಿಗೆ ನೂರು ರೂಪಾಯಿ ಕೊಟ್ಟು ಬಂದೆ. ಆ ಹುಡುಗನಿಗೆ ಹಸಿವೆಯಾಗಿರುತ್ತೆ ಅಂತ ಪಕ್ಕದಲ್ಲೇ ಇದ್ದ ಹೋಟೆಲಿನಿಂದ ಇಡ್ಲಿ ತರಿಸಿ ತಿನ್ನಿಸಿ ಒಂದು ದೊಡ್ಡ ಬಿಸ್ಕೆಟ್ ಪ್ಯಾಕೆಟ್ ಚಾಕಲೇಟ್ ಕೊಟ್ಟು ಬಂದೆ ಕಣೇ! ಜೊತೆಗೆ ನನ್ನ ಅಡ್ರೆಸ್ ಸಹ ಕೊಟ್ಟು ಬಂದಿದೀನಿ ನಾಳೆ ಬಂದು ನನಗೆ ತಿಳಿಸಿ ಅಂತ.''

ಎಂದು ಅವರು ಹೇಳಿದಾಗ ಸುಮ್ಮನೆ ಅವರು ಅಷ್ಟು ಖರ್ಚು ಮಾಡಿದ್ದು ನನಗೆ ಸರಿಬೀಳಲಿಲ್ಲವಾದರೂ ನಾವು ತೆಗೆದುಕೊಂಡ 'ನಿರ್ಣಯ' ಅಂಥಾದ್ದು ಎಂದುಕೊಂಡು ಸುಮ್ಮಗಾದೆ.

ಮಾರನೆ ದಿನ ಇವರು ಆಫೀಸಿಗೆ ಹೊರಟು, ಮಕ್ಕಳು ಶಾಲೆಗೆ ಹೋದ ಮೇಲೆ ಟಿ. ಸುನಂದಮ್ಮನವರ 'ಜಂಭದ ಬೇಲಿ' ಪುಸ್ತಕ ಓದೋಣವೆಂದು ಕೈಯಲ್ಲಿ ಹಿಡಿಯುತ್ತಿದ್ದ ಹಾಗೆ ನಮ್ಮ ಮನೆಯಿಂದ ಎರಡನೇ ಮನೆಯ ಅಜ್ಜಿ ಬಿರುಗಾಳಿಯಂತೆ ಬಂದು ಕೈಯಿ ಬಾಯಿ ತಿರುಗಿಸುತ್ತ

ಏನಮ್ಮ ಪದ್ದೂ! ನಿಮ್ಮೆಜಮಾನರಿಗೆ ಬುದ್ಧಿ ಗಿದ್ಧಿ ಸರಿಯಾಗಿದೆಯೋ ಇಲ್ವೋಂತೀನಿ. ಬೇಗ ಹೋಗ ಡಾಕ್ಟರಿಗೆ ತೋರಿಸಿಕೊಂಡು ಬಾ. ಅಲ್ಲಾ ಆ ಬ್ರಾಹ್ಮಣ ಒಬ್ಬರ ತಂಟೆಗೆ ಹೋಗದೆ ಆಫೀಸಿಗೆ ಅಂಥಾ ಚೆನ್ನಾಗಿ ಹೋಗಿ ಬಂದು ಮಾಡ್ತಿದ್ನಲ್ಲಾ, ನಾನೇ ನೋಡಿದೀನಿ. ಪಾಪ! ಒಬ್ಬರ ತಂಟೆಗೆ ಹೋಗುತ್ತಿರಲಿಲ್ಲ. ಆತಂಗೆ ಇದ್ದಕ್ಕಿದ್ದ ಹಾಗೆ ಏನಾಯ್ತೂಂತೀನಿ?'' ಎಂದು ಅಚ್ಚರಿಪಡುತ್ತ ಬೆರಳು ಕಚ್ಚಿನಿಂತ ಆ ಪಾಟೆಯನ್ನು ನೋಡಿ ನನಗೆ ಜಂಘಾಬಲವೇ ಉಡುಗಿದಂತಾಯಿತು. ''ದೇವರೇ! ಏನು ಗ್ರಹಚಾರ ಬಂತಪ್ಪಾ?'' ಎಂದು ಗಾಬರಿಗೊಂಡು ''ಪಾಟಿ! ಯಾಕ್ಹೀಗೆ ಹೇಳ್ತಿದೀರ? ಅವರಿಗೇನಾಯ್ತು? ನಿಮಗೆ ಹೇಗೆ ಗೊತ್ತಾಯ್ತು?'' ಎಂದೆ.

''ಹ್ಯಾಗೆ ಅಂತ ಕೇಳೋದು ಬೇರೇನಾ? ಪೋಲೀಸ್ನೋನು ಹೇಳ್ದ ನಿಮ್ಮನೆ ಅಡ್ರೆಸ್ ಕೂಡ ಅವನೇ ಹೇಳಿದ್ದು.''

ನನ್ನ ಹೃದಯ ತಟಕ್ಕನೆ ನಿಂತಂತಾಯ್ತು.

''ಪೋಲಿಸನ್ನು ಹೇಳಿದ್ನಂತೆ, ಎಲ್ಲಿ ಇವರಿಗೆ ಸ್ಕೂಟರ್ ಆಕ್ಸಿಡೆಂಟೋ ಅಂತ ಇನ್ನೇನೋ'' ಎಂದುಕೊಂಡು ನನ್ನ ಕೈಕಾಲು ನಡುಗತೊಡಗಿತು.

''ಯಾವ ಪೋಲಿಸ್ನೋನು ಅಜ್ಜಿ? ಬೇಗ ಹೇಳಿ'' ಎಂದೆ – ಹೊರಕ್ಕೆ ಓಡಲು ಸಿದ್ಧಳಾದೆ.

ಸದ್ಯ ಆ ಪಾಟೆ ನನ್ನನ್ನು ಹೆಚ್ಚು ಹೊತ್ತು ಸಸ್ಪೆನ್ಸ್‌ನಲ್ಲಿಡದೇ ''ಅಲ್ವೇ ಪದ್ದೂ! ನನ್ನ ಮೊಮ್ಮಗ ಸುನಿಲ್‌ನ ನಿನ್ನ ಗಂಡ ಎಷ್ಟು ಸಲ ನೋಡಿಲ್ಲಾ! ಅವರು ಡೆಲ್ಲಿಯಿಂದ ಬಂದು ಒಂದು ತಿಂಗಳಾಯ್ತಲ್ಲ. ನಿನ್ನ ಸಂಜೆ ನನ್ ಮಗಳೂ ಸೊಸೆ ತುಳಸಿ ಸ್ಟೋರ್‌ನಲ್ಲಿ ಬಟ್ಟೆ ಖರೀದಿ

ಮಾಡ್ತಾ ನಿಂತಿದ್ರಂತೆ, ಸುನಿಲ್ ತನಗೇನೋ ಕೊಡಿಸು ಅಂತ ಹಠ ಮಾಡಿದ್ದಕ್ಕೆ ಅವನಮ್ಮ ಗದರಿದಳೂಂತ ಕಾಣುತ್ತೆ. ಆ ಮಗು ಬೀದಿ ದೀಪದ ಕಂಬದ ಹತ್ತಿರ ಮುನಿಸಿಕೊಂಡು ನಿಂತಿದ್ದಕ್ಕೆ ನಿನ್ನ ಗಂಡ ಅವನನ್ನ ಕರೆದುಕೊಂಡು ಎರಡು ಮೈಲಿ ದೂರದಲ್ಲಿರೋ ಪೋಲಿಸ್‌ಸ್ಟೇಷನ್‌ನಲ್ಲಿ ಬಿಟ್ಟು ಬರೋದಾ? ಆ ಹುಡುಗಂಗೆ ಬೇರೆ ಕನ್ನಡ ಮಾತಾಡೋಕೇ ಬರೋಲ್ಲ. ನಿನ್ನ ಗಂಡನ ಬುದ್ಧಿಗೆ ಮಂಕು ಗಿಂಕು ಕವಿತೋಂತೀನಿ'' ಎಂದು ಅಜ್ಜಿ ಛೇಡಿಸಿದಾಗೆ ನನಗೆ ಹೊಳೆಯಿತು, ಹಿಂದಿನ ದಿನದ ಸಂಜೆ ಆಟೋನಲ್ಲಿ ಹುಡುಗನನ್ನು ಕೂಡಿಸಿಕೊಂಡು ಇನ್ನೂರು ರೂಪಾಯಿತನಕ ಖರ್ಚುಮಾಡಿ ಪೋಲೀಸ್ ಸ್ಟೇಷನ್‌ಗೆ ಬಿಟ್ಟು ಬಂದ ಹುಡುಗ ಡೆಲ್ಲಿಯಿಂದ ಬಂದ ಪಕ್ಕದ ಮನೆ ಅಜ್ಜಿ ಮಗಳ ಮಗ ಅಂತ. ನನಗೆ ಬೇಸರದ ಜೊತೆಗೆ ನಾಚಿಕೆಯೂ ಆಯಿತು. ಅಜ್ಜಿಯ ಕ್ಷಮಾಪಣೆ ಕೇಳಿಕೊಂಡೆ.

ಅವರಂತೆ ನಾನೂ ಒಂದು ಸಲ ಬೇಸ್ತುಬಿದ್ದೆ, ನಾನು ನನ್ನ ಗೆಳತಿ ರಾಧನ ಜೊತೆ ಬೆಳ್ಳಿ ಅಂಗಡಿಯಲ್ಲಿ ವ್ಯಾಪಾರ ಮಾಡುತ್ತಿದ್ದಾಗ ಒಬ್ಬ ಹುಡುಗ ತಲೆ ಕೆದರಿಕೊಂಡು ಮಾಸಲು ಬಟ್ಟೆ ಹಾಕಿಕೊಂಡು ನಮ್ಮ ಮುಂದೆ ಬಂದು ನಿಂತುಕೊಂಡ. ಅವನನ್ನು ನೋಡಿ ನನಗೆ ಕನಿಕರ ಮೂಡಿತು, ಪರ್ಸ್ ತೆಗೆದು ಒಂದು ರೂಪಾಯಿ ತೆಗೆದು ಕೊಡಲು ಹೋದಾಗ ನನ್ನ ಗೆಳತಿ ಮೆಲ್ಲನೆ ನುಡಿದಳು ''ಏಯ್ ಪದ್ದೂ! ಈ ಹುಡುಗ ಈ ಅಂಗಡಿ ಮಾಲೀಕನ ಮಗಕಣೆ ಸುಮ್ನಿರು'' ಎಂದಳು. ಸದ್ಯ, ಅಂಗಡಿ ಮಾಲೀಕ ನೋಡಲಿಲ್ಲ.

ಮೂರನೆಯ ಸಲ ಸ್ವಲ್ಪ ಬೇಸರದ ಘಟನೆಯೇ ನಡೆಯಿತು. ನಲ್ಲಿಯಲ್ಲಿ ಎರಡು ಮೂರು ದಿನದಿಂದ ನೀರು ಬಂದಿರಲಿಲ್ಲ. ಪಾತ್ರೆ ತೊಳೆಯಲು ನಮ್ಮ ಮನೆ ಕೆಲಸದವಳು ದೇವೀರಿ ನಮ್ಮ ಬೀದಿಯಲ್ಲಿದ್ದ ಬೋರ್‌ವೆಲ್‌ನಿಂದ ನೀರನ್ನು ಬಿಂದಿಗೆಯಲ್ಲಿ ಹೊತ್ತು ನಮ್ಮ ಮನೆಯ ಮಹಡಿ ಮೆಟ್ಟಿಲನ್ನು ಹತ್ತುತ್ತಿದ್ದಳಂತೆ, ಕಾಲು ಜಾರಿ ಆಯತಪ್ಪಿ ಬೀಳುವುದರಲ್ಲಿದ್ದಳೆಂದು ಅಲ್ಲೇ ಬಾಲ್ಕನಿಯಲ್ಲಿ ನಿಂತು ಪೇಪರ್ ಓದುತ್ತಿದ್ದ ನಮ್ಮವರು ಅದನ್ನು ನೋಡಿ ತಟ್ಟನೆ ಹೋಗಿ ಆಸರೆ ಕೊಟ್ಟು ಅವಳು ಮೆಟ್ಟಲಿನಿಂದ ಬೀಳದಂತೆ ಹಿಡಿದುಕೊಳ್ಳಲು ಹೋದರಂತೆ (ಪರೋಪಕಾರದ ಬುದ್ಧಿಯಿಂದ) ಅವಳು ತಾನು ಬೀಳುವುದಕ್ಕಿಂತ ಹೆಚ್ಚಾಗಿ ಮನೆ ಯಜಮಾನ ತನ್ನನ್ನು ಹಿಡಿದುಕೊಳ್ಳಲು ಬಂದ ಕಾರಣಕ್ಕೆ ದೊಡ್ಡ ರಾದ್ಧಾಂತವನ್ನೇ ಮಾಡಿಬಿಟ್ಟಳು. ಈ ಘಟನೆಯಾದ ಒಂದು ವಾರದವರೆಗೆ ನಾನೂ ನಮ್ಮೆಜಮಾನರೂ ಅಕ್ಕಪಕ್ಕದವರಿಗೆ ಮುಖ ತೋರಿಸಿದ್ದರೆ ಕೇಳಿ.

ಕೊನೆಯ ಬಾರಿಯ ನಮ್ಮ ಪರೋಪಕಾರದ ಪ್ರಯತ್ನ ಹೀಗಾಯಿತು. ನಮ್ಮ ರಸ್ತೆಯ ಕೊನೆಯಲ್ಲಿದ್ದ ಬಂಗಲೆಯಲ್ಲಿ ಒಂದು ಮುದುಕಿ ವಾಸವಾಗಿತ್ತು. ಆಕೆ ಒಳ್ಳೇ ಸ್ಥಿತಿವಂತೆ. ಆಕೆ ಎಂದೂ ತಮ್ಮ ಮನೆ ಕಾಂಪೌಡು ಬಿಟ್ಟು ಈಚೆ ಬರುತ್ತಿರಲಿಲ್ಲ. ಒಂದು ದಿನ ನಮ್ಮ ಮನೆ ಕೆಲಸದವಳು ಆ ಮುದುಕಿಗೆ ತುಂಬಾ ಖಾಯಿಲೆ ಎಂದು ಹೇಳಿದಳು. ನಾವು ''ಪಾಪ! ಬಹು ವರುಷಗಳಿಂದ ಒಂದೇ ಬೀದಿಯಲ್ಲಿದ್ದೇವಲ್ಲ. ನೋಡಿಕೊಂಡು ಬರೋಣ'' ಅಂತ ಒಂದಷ್ಟು ಹಣ್ಣುಗಳನ್ನು ತೆಗೆದುಕೊಂಡು ಆಕೆಯನ್ನು ನೋಡಲು ಹೋದೆವು.

ಮಂಚದ ಮೇಲೆ ಮುದುಕಿಯ ಕಾಯಿಲೆ ವಿಷಯ ವಿಚಾರಿಸಿದೆವು. ಸ್ವಲ್ಪ ಹೊತ್ತು ಅಲ್ಲೇ ನಿಂತಿದ್ದೆವು.

ಪಾಪ! ನೀವು ನನ್ನನ್ನು ವಿಚಾರಿಸಿಕೊಳ್ಳಲು ಬಂದಿದ್ದೀರಿ. ಎಂತಲೋ 'ಥ್ಯಾಂಕ್ಸ್' ಎಂತಲೋ ಹೇಳಬಹುದೆಂದುಕೊಂಡಿದ್ದ ನಮಗೆ ಮುದುಕಿ ತಟಕ್ಕನೆ ಹಾಸಿಗೆಯ ಮೇಲೆದ್ದು ಕುಳಿತು –

"ಏನೋ ಒಬ್ಬಂಟಿಗಳು. ಜೊತೆಗೆ ಮನೇಲಿ ಅಷ್ಟೋ ಇಷ್ಟೋ ಇದೇಂತ ಎಲ್ಲರಿಗೂ ಗೊತ್ತೀದೇಪ್ಪಾ! ಅದಕ್ಕೇಂತನೇ ನನ್ನ ಖಾಯಿಲೆ ವಿಚಾರಿಸಿಕೊಳ್ಳೋ ನೆಪದಲ್ಲಿ ಬಂದು ಎಂಥೆಂಥಾವ್ರು ಏನೇನು ಮಾಡ್ತಾರೇಂತ ಹೇಳೋಕ್ಕಾಗಲ್ಲ ಈಗಿನ ಕಾಲ್ದಲ್ಲಿ. ನಂಗಂತೂ ನನ್ನ ಖಾಯಿಲೆಗಿಂತ ಈ ಯೋಚನೇನೇ ಭಾಳ ಆಗ್ಬಿಟ್ಟಿದೆ. ಹೂ...ಸ್ವಪ್ಪಾ" ಎಂದು ದೊಡ್ಡ ನಿಟ್ಟುಸಿರು ಬಿಟ್ಟಾಗ ನಾನೂ ಅವರೂ ಪರಸ್ಪರ ಮುಖ ನೋಡಿಕೊಂಡೆವು. ಮುದುಕಿ ಮುಂದುವರೆಸಿತು.

"ನೋಡೋದಕ್ಕೆ ಸಭ್ಯ ಸಂಸಾರಸ್ಥರು ಇದ್ದ ಹಾಗೇ ಇರ್ತಾರೆ ಹಣ್ಣು ಹಂಪಲು ತಂದು ಕೊಟ್ಟು ಮರಳು ಮಾಡಿ ಮನೇಲಿರೋದನ್ನಾ ಹೊತ್ತಾಕ್ತಾರೆ ಎಚ್ಚರವಾಗಿರು! ಅಂತ ಹೋದ್ಸಲ ನನ್ನ ಮಗಳು ಬಂದಾಗ ಹೇಳಿದ್ಲು. ಈಚೀಚೆಗೆ ಹೆಂಗಸರೂ ಬಾಳ ಚಾಲಾಕಾಗಿ ನಮ್ಮಂಥಾವರ್ನ ಮೋಸ ಮಾಡ್ತಿರ್ತಾರೇಂತ ಎಚ್ಚರಿಕೆ ಕೊಟ್ಟಳು. ಈ ಕಾಲ್ದಲ್ಲಿ ಯಾರನ್ನೂ ನಂಬೋಕ್ಕಾಗಲ್ಲಾ...." ಅಂತ ಮುದುಗಿ ರಾಗ ಎಳೆದು ಕೆಳಸದವಳನ್ನ ಕರೆದ "ಜಯಮ್ಮಾ! ಇವ್ರು ಹೋದ್ಕೂಡ್ಲೆ ಬಾಗಿಲು ಭದ್ರವಾಗಿ ಹಾಕು ಒಳಗೆ ಯಾರ್ನೂ ಬಿಡ್ಬೇಡ" ಎಂದು ರಾಜ ಎಳೆದು ಹೊದಿಕೆ ಸರಿ ಮಾಡಿಕೊಂಡು ಗೋಡೆಕಡೆ ಮುಖ ಮಾಡಿ ಮಲಗಿಬಿಟ್ಟಾಗ ನನ್ನ ಅವರ ಮುಖ ನೋಡಬೇಕಿತ್ತು.

ಹೀಗಾಗಿ ನಮ್ಮ 'ಯುಗಾದಿ ನಿರ್ಣಯ' ಅಂದಿಗೇ ಮುರಿದು ಬಿತ್ತು.

ಕಾರಣ

IIM ನವರು ಸೌಂದರ್ಯರಾಣಿ ಸ್ಪರ್ಧೆ ನಡೆಸಲು ಹೊರಟು ನಂತರ ಯೋಚನೆಯನ್ನು ಕೈಬಿಟ್ಟರೇಕೆ?


ಏಕೆಂದರೆ ವಿಜೇತಳನ್ನು "ಮಿಸ್ ಮ್ಯಾನೇಜ್‌ಮೆಂಟ್" ಎಂದು ಕರೆಯಬೇಕಾಗಿ ಬರುವುದರಿಂದ.

– ಆನಂದ

ತುಂತುರು

- ತಾಯಿ ಕ್ರಿಯಾಪದ, ನಾಮಪದ ಅಲ್ಲ
- ಅಂದು ಡು ಆರ್ ಡೈ, ಇಂದು ಡು ಬಿಫೋರ್ ಯು ಡೈ
- I speak in two languages - body and English
- ಹಸಿದವನ ಸಾಂತ್ವನ: ಇವತ್ತಿನ ನೀರು ತುಂಬಾ ಸಿಹಿ ಕಣೋ, ಅದನ್ನು ಕುಡಿದ ಮೇಲೆ ಹೊಟ್ಟೆಯಲ್ಲಿ ಏನೂ ಜಾಗ ಇಲ್ಲ.
- ಇತ್ತೀಚೆಗೆ ವಿಕೆಟ್ ಹಿಂದೆ ಹೋದ ಬೈಗಳಿಗಿಂತ, ಆಟಗಾರರು ಅಂದ ಬೈಗಳೇ ಹೆಚ್ಚಾಗುತ್ತಿವೆ.
- After IPL, Cricket has become a rich Gentlemen's game
- ಪ್ರತಿ ಯಶಸ್ವಿ ಮಹಿಳೆಯ ಹಿಂದೆ ಒಬ್ಬ ದಕ್ಷ ಮನೆಗೆಲಸದವಳು ಇರುತ್ತಾಳೆ.
- ಭರ್ಜರಿಯಾಗಿ ಸಿಂಗರಿಸಿಕೊಂಡಿರುವ ಸುಳ್ಳಿಗಿಂತ ನಗ್ನ ಸತ್ಯವೇ ಮೇಲು.
- Don't talk unless you can improve upon the silence
- ನಶ್ಯದ ಡಬ್ಬಿಗೆ ಸೀನುವ ಹಕ್ಕಿಲ್ಲ.
- ಕೊನೆ ಘಳಿಗೆಯಲ್ಲಿ ದೇವರು ಮತ್ತು ತಾಲೀಮು ಎರಡೂ ಕೆಲಸಕ್ಕೆ ಬರುವುದಿಲ್ಲ.
- Is Inglish our conquest of English?

- ದನಂಆ



ಕಾಫೀ ಹೌಸ್

(ಇದೊಂದು ಹೊಸ ಅಂಕಣ. ದಿನನಿತ್ಯದ ಸ್ವಾರಸ್ಯಕರ ಆಗುಹೋಗುಗಳನ್ನು ಯಾವುದಾದರೂ ದರ್ಶಿನಿಯಲ್ಲಿ ನಿಂತು ಕಾಫಿ ಸಿಪ್ ಮಾಡುವಂತೆ ಈ ತುಣುಕುಗಳನ್ನು ಸವಿಯಬಹುದು. ನಿಮ್ಮೊಂದಿಗೆ ಹಂಚಿಕೊಂಡಿರುವ ಅನುಭವ/ಅನಿಸಿಕೆಗಳನ್ನು ಓದಿದ ಮೇಲೆ ನೀವೂ ಅಂತಹುದೇ ಅನುಭವಗಳನ್ನು ನಮ್ಮೊಂದಿಗೆ ಹಂಚಿಕೊಳ್ಳಲು ಇಷ್ಟಪಟ್ಟರೆ ಇಗೋ ನಿಮಗೆ ಮುಕ್ತ ಆಹ್ವಾನ.)

ಅದೊಂದು ಹಳ್ಳಿಯ ಶಾಲೆ. ಶಾಲೆ ಮಕ್ಕಳಿಗೆ ವಿಜ್ಞಾನದ ಪ್ರಯೋಗಗಳನ್ನು ಮಾಡಿ ತೋರಿಸೋಕ್ಕೆ ಅಂತ ನಾನು ನಮ್ಮ ಮೊಬೈಲ್ ಲ್ಯಾಬ್ ಜೊತೆ ಅಲ್ಲಿಗೆ ಹೋಗಿದ್ದೆ. ಆ ಹಳ್ಳೀ ತಲುಪೋದೇ ಒಂದು ಅಡ್ವೆಂಚರ್ ಆಗಿತ್ತು. ಆ ಮಣ್ಣಿನ ರಸ್ತೆ, ರಸ್ತೆ ಮಧ್ಯದ ಕೊರಕಲುಗಳು, ಒಟ್ಟಿನಲ್ಲಿ ಬ್ಯಾಕ್ ಆಫ್ ದ ಬಿಯಾಂಡ್ ಎನ್ನುವಂತಹ ಜಾಗ. ಮಕ್ಕಳೆಲ್ಲಾ ಬಹು ಚುರುಕಾಗಿದ್ದರು. ಕೇಳಿದ ಪ್ರಶ್ನೆಗಳಿಗೆಲ್ಲಾ ಪಟಪಟನೆ ಉತ್ತರ. ಶಾಲೆಯ ಉಪಾಧ್ಯಾಯರುಗಳೂ ಆಸಕ್ತಿ ವಹಿಸಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಎಲ್ಲಾ ಮುಗಿದ ಮೇಲೆ ಒಬ್ಬ ಯುವ ಶಿಕ್ಷಕ ತನ್ನ ಬಳಿ ಬಂದ. "ಸಾರ್, ನೀವು ಮಾಡಿ ತೋರಿಸಿದ ಉಪಕರಣಗಳು ಬಹಳ ಚೆನ್ನಾಗಿವೆ. ನನಗೂ ಇಂತಹ ಉಪಕರಣಗಳನ್ನ ತಯಾರಿಸೋದನ್ನ ಕಲಿಯಲು ಆಸೆ. ದಯವಿಟ್ಟು ನನಗೂ ಇದನ್ನ ಹೇಳಿಕೊಡ್ತೀರಾ?" ಅಂತ ಕೇಳಿದ. ಈ ಕೆಲಸ ಕಲಿಯಬೇಕಾದರೆ ಕನಿಷ್ಟ ಪಕ್ಷ ಒಂದು ವಾರವಾದರೂ ಬೇಕು. ಹೇಗಪ್ಪಾ ಅಷ್ಟು ಸಮಯ ಹೊಂದಿಸೋದು ಅಂತ ಯೋಚನೆ ಮಾಡುತ್ತಿದ್ದೆ. ನನ್ನ ಹಿಂಜರಿಕೆ ನೋಡಿ, "ನಿಮಗೆ ಸಂಭಾವನೆ ಕೊಡ್ತೇನೆ ಸಾರ್, ಇದನ್ನೆಲ್ಲಾ ಕಲಿಸಿಕೊಡೋದಕ್ಕೆ.... ನಮ್ಮ ಇಲಾಖೆಯೋರು ಸೆಲ್ಫ್ ಇಂಪ್ರೂವ್‌ಮೆಂಟ್‌ಗೆ ಅಂತ ಎಲ್ಲಾ ಶಿಕ್ಷಕರಿಗೂ ತಲಾ ಐನೂರು ರೂಪಾಯಿ ಮಂಜೂರು ಮಾಡಿದ್ದಾರೆ. ನಾವು ನಾಲ್ಕು ಜನ ಸೇರ್ತೀವಿ. ಒಂದು ವರ್ಕ್‌ಶಾಪ್ ಮಾಡಿ ಸಾರ್". ಅಂದ ಆ ಯುವಕ.

- ಶಿವು

★★★

ನನ್ನ ಆಫೀಸಿಗೆ ಹೋಗುವುದಕ್ಕೆ ಒಂದು ದೊಡ್ಡ ರಸ್ತೆ,ಅದರ ಇಕ್ಕೆಲೆಗಳಲ್ಲಿ ದೊಡ್ಡ ದೊಡ್ಡ ಮರ ಮತ್ತು ಅಗಲವಾದ ಫುಟ್ ಪಾತು. ಸ್ಕೂಲು ಕಾಲೇಜಿಗೆ ಹೋಗುವ ಮಕ್ಕಳು ಇದೇ ರೋಡಿನಲ್ಲಿ ಸಾಗಬೇಕು. ಆಫೀಸಿನಲ್ಲಿ ಕೆಲಸ ಮಾಡಲು ಮೊದಲು ಮಾಡಿದ ನಂತರ ಅಲ್ಲಿ ಎರಡೂ ಕಾಲುಗಳಿಲ್ಲದ ಒಬ್ಬ ಭಿಕ್ಷುಕ ಪ್ರತಿ ದಿವಸ ನನ್ನನ್ನು ನೋಡಿದ ಕೂಡಲೇ ಕೈಯೆತ್ತಿ ನಮಸ್ಕಾರ ಮಾಡುವುದೂ ನಾನು ಅವನಿಗೆ ಜೇಬಿನಿಂದ ಎರಡು ರೂಪಾಯಿಯ ನಾಣ್ಯ ಕೊಡುವುದೂ ಸುಮಾರು ದಿವಸ ನಡೆಯಿತು. ಒಂದು ದಿವಸ ಸೋಮೀ ಊರಿಗೆ ಹೋಗಿಬಿಡ್ತೀನೀ ನಾಳೆ. . . . . ಸಂಪಾದನೇಲಿ ಜೀವನ ಮಾಡುಕ್ಕೆ ಕಷ್ಟ ಅಂದ ಅವನು. ನಾಳೆಯಿಂದ ಇವನು ಬರುಲ್ಲ ಅಂತ ಎರಡು ರೂಪಾಯಿನ ಬದಲಿಗೆ ಐದು ರೂಪಾಯಿನ ನಾಣ್ಯ ಹಾಕಿದೆ.

- ಎಚ್.ಗೋಪಾಲಕೃಷ್ಣ

ಭಾರತದ ಹಾಕಿ ತಂಡ ಒಲಂಪಿಕ್ ಸ್ಪರ್ಧೆಯಲ್ಲಿ ಭಾಗವಹಿಸಲು ಸಾಧ್ಯವಾಗುತ್ತಿಲ್ಲ ಎಂದು ತಿಳಿದು ಬಂದಾಗ ಅನೇಕ ಹಾಕಿ ಅಧಿಕಾರಿಗಳು ಗೋಳೋ ಎಂದು ಅತ್ತರಂತೆ. ವಿವಿಧ ನೆಪ ಒಡ್ಡಿ ಅದರಲ್ಲಾ ಸರ್ಕಾರಿ ಅಥವಾ ಹಾಕಿ ಫೆಡರೇಷನ್ ಖರ್ಚಿನಲ್ಲಿ ತಂಡದ ಜತೆಯಲ್ಲಿ ಬೀಜಿಂಗ್‌ಗೆ ಹೋಗಲು ಭಾರೀ ಯೋಜನೆ ಹಾಕಿಕೊಂಡಿದ್ದು ಅದು ಠುಸ್ ಆಗಿದ್ದಕ್ಕೆ ಅವರಿಗೆ ತೀವ್ರ ನಿರಾಸೆಯಾಗಿ ದುಃಖ ಉಮ್ಮಳಿಸಿ ಬಂದು ಕಣ್ಣೀರು 'ಹಾಕಿ'ದರು ಎಂದು ಸುದ್ದಿ. ನಮ್ಮ ಹಾಕಿ ಆಟಗಾರರು ಅವರನ್ನು ಅಂತಹ ಸ್ಥಿತಿಯಲ್ಲಿ ಹಾಕಬಾರದಿತ್ತು.

- ಆನಂದ

★★★

ಇದು ನಮ್ಮ ತಂದೆ ನನಗೆ ಹೇಳಿದ್ದು, ಬಹಳ ಹಿಂದೆ ನಮ್ಮ ತಂದೆ ನಮ್ಮೂರಿನ ಹತ್ತಿರದ ಒಂದು ಹಳ್ಳಿಗೆ ಸ್ನೇಹಿತ ರಾಜಾರಾಯ ಅನ್ನುವವರ ಮನೆಗೆ ಹೋಗಿದ್ದರು. ಆಗ ರಾಜಾರಾಯರು ನೀನು ಬಂದಿದ್ದು ಒಳ್ಳೇದಾಯಿತು ಸುಬ್ಬರಾಯ ಕೂಡಾ ನಿನ್ನನ್ನ ನೋಡಬೇಕೂಂತಿದ್ದ ಅಂದರು. ಅದಕ್ಕೆ ನಮ್ಮ ತಂದೆ ನಾನು ಈ ಸಾರಿ ಸುಬ್ಬರಾಯನನ್ನ ನೋಡೋದಿಲ್ಲ ನಾನು ಬಂದದ್ದು ಹೋದದ್ದು ನೀನು ಅವನಿಗೆ ಹೇಳಲೂ ಬೇಡ ಅಂದರಂತೆ. ಆದರೆ ಸ್ವಲ್ಪ ಹೊತ್ತಿಗೆ ಸುಬ್ಬರಾಯರೇ ಅಲ್ಲಿಗೆ ದಯಮಾಡಿಸಿ ನಮ್ಮ ತಂದೆಗೆ ರಾಜಾರಾಯರ ಮನೆ ಆಳು ಹೇಳಿದ ನೀವು ಈ ಸಾರಿ ನನ್ನನ್ನ ನೋಡಲ್ಲ ಅಂದರಂತೆ ಅದಿಕ್ಕೆ ನಾನೇ ನಿಮ್ಮನ್ನ ನೋಡೋಣ ಅಂತ ಬಂದೆ ಅಂದರು. (ಆಳನ್ನ ಕಂಡ ಸುಬ್ಬರಾಯರು ಕೇಶವಮೂರ್ತಿಗಳು (ನಮ್ಮ ತಂದೆ) ಬಂದಿದಾರ್ಯೇ ಅಂತ ಕೇಳಿದಾರೆ ಅದಕ್ಕೆ ಅವನು ಆ ರೀತಿ ಹೇಳಿದಾನೆ) ಇದರ ಸಾರಾಂಶ ಏನಪ್ಪ ಅಂದರೆ ಆಳು ಮಾಡಿದ್ದು ಹಾಳು ಅನ್ನೋ ಹಾಗೆ ಆಳಿಗೆ ಕೆಲಸ ಹೇಳುವಾಗ ಹೇಗೆ ಎಚ್ಚರಿಕೆಯಲ್ಲಿರಬೇಕೋ ಹಾಗೆ ಸೂಕ್ಷ್ಮವಾದ ಮಾತುಗಳನ್ನು ಆಡುವಾಗ ಕೂಡ ಆಳುಗಳು ಅಕ್ಕಪಕ್ಕ ಇಲ್ಲದ ಹಾಗೆ ನೋಡ್ಕೊಬೇಕು ಅಂತ.

- ಬೇಲೂರು ರಾಮಮೂರ್ತಿ

★★★

ಕನಕಪುರ ರೋಡ್ ಗೊತ್ತಲ್ವಾ ನಿಮ್ಗೆ, ಆ ರಸ್ತೇಲಿ ಕಾವೇರಿ ಫ್ಲೋರ್ಡ್ ಕಂಪನಿ ಎದುರು ರಸ್ತೆಯಿಂದ ಒಳಗ್ ಬಂದ್ರೆ ಇಸ್ರೋ ಲೇಔಟು, ಆ ಲೇಔಟಲ್ಲೇ 103 ವರ್ಷದ ಎ.ಎನ್. ಮೂರ್ತಿರಾಯರ ಮನೆ ಇತ್ತು. ನನಗೆ ಅವರನ್ನ ಭೇಟಿ ಆಗೋ ಆಸೆ ಇತ್ತು, ಅವಕಾಶ ಆಗಿರಲಿಲ್ಲ, ಅವತ್ತು ಅವರ ಮನೆ ಇರೋ ರಸ್ತೇಲೇ ಬರ್‍ತಾ ಇದೀನೀ... ಅವರ ಮನೆ ಮುಂದೆ ಒಂದು ದೊಡ್ಡ ಲಾರಿ, ಆ ಲಾರಿ ಮೇಲೆ ಮೆರವಣಿಗೆಗೆ ಅಣಿಯಾಗಿರೋ ಒಂದು ಕಳೇಬರ, ಸುತ್ತಲೂ ಜನ! ಸರಿ, ಇದ್ದಾಗಂತೂ ನೋಡಕ್ಕಾಗ್ಲಿಲ್ಲ, ಕಡೇ ಬಾರಿ ಮುಖವಾದ್ರೂ ನೋಡೋಣಾಂತ ಜನರ ಮಧ್ಯೆ ನುಸುಳಿ ನಿಂತೆ. ಲಾರಿ ಮೇಲಿರೋ ಕಳೇಬರದ ಮುಖ ಎಲ್ಲಾದ್ರೂ ಕಂಡೀತೇ? ಮೂರ್ತಿರಾಯರ ಮನೆಯ ಕಾಂಪೌಂಡನ್ನಾದರೂ ಏರಿ ಒಮ್ಮೆ, ಒಮ್ಮೆಯಾದರೂ ಮುಖ ನೋಡೇಬಿಡೋಣಾಂತ ನಿರ್ಧರಿಸಿ ಅವರ ಮನೆಯ ಗೇಟ್ ಬಳಿ ಹೋದೆ. ಗೇಟ್ ಒಳಗಿಂದ ಹಾಕಲ್ಪಟ್ಟಿತ್ತು. ನಾನು ಗೇಟ್ ಹತ್ತಿ ಇನ್ನೇನು ಕಾಂಪೌಂಡ್ ಏರಬೇಕು ಎನ್ನುವಷ್ಟರಲ್ಲಿ ಅವರ ಮನೆಯ ಮುಂಬಾಗಿಲು ತೆರೆಯಿತು. ದುಡುಮುಡು ನಡೆಯುತ್ತಾ ಮುಂಬಾಗಿಲಿನಿಂದ ಗೇಟಿನತ್ತ ಧಾವಿಸಿ ಬಂದರು ಮೂರ್ತಿರಾಯರು.

- ರಾಮನಾಥ್

ಕೊರವಂಜಿ ಮತ್ತು ಅಪರಂಜಿಗಳ ಸಮಗ್ರ ಗಣಕೀಕರಣ

ಕೊರವಂಜಿ ಮತ್ತು ಅಪರಂಜಿ ಪತ್ರಿಕೆಗಳ ಮೊದಲ ಸಂಚಿಕೆಯಿಂದ ಇಲ್ಲಿನವರೆಗೆ ಪ್ರಕಟವಾಗಿರುವ ಎಲ್ಲ ಸಂಚಿಕೆಗಳನ್ನೂ ಗಣಕೀಕರಿಸುವ ಯೋಜನೆಯ ಬಗ್ಗೆ ನಮ್ಮ ಹಿಂದಿನ ಸಂಚಿಕೆಯಲ್ಲಿ ಪ್ರಸ್ತಾಪಿಸಿದ್ದೆವು. ನಮ್ಮಲ್ಲಿ ಲಭ್ಯವಿಲ್ಲದ ಹಲವು ಸಂಚಿಕೆಗಳನ್ನು ದೊರಕಿಸಿಕೊಡಿರೆಂದು ಓದುಗ ಬಾಂಧವರಲ್ಲಿ ನಾವು ಸಲ್ಲಿಸಿದ ವಿನಂತಿಗೆ ಒಳ್ಳೆಯ ಪ್ರತಿಕ್ರಿಯೆ ಕಂಡುಬಂದಿದೆ. ನಮ್ಮಲ್ಲಿಲ್ಲದ ಎರಡೂ ಅಪರಂಜಿ ಸಂಚಿಕೆಗಳನ್ನು (ಅಕ್ಟೋಬರ್ 1993 ಮತ್ತು ಜನವರಿ 1994) ಡಾ|| ಎಂ.ಎಸ್.ಎಸ್. ರಾವ್ ಅವರು ಒದಗಿಸಿಕೊಟ್ಟರು. ಗೆಳೆಯ ಸುಬ್ಬರಾಮ್ ಅವರು ಕೊರವಂಜಿಯ ಎರಡು ಸಂಚಿಕೆಗಳನ್ನು (ಜೂನ್ 1950 ಮತ್ತು ಫೆಬ್ರವರಿ 1951) ಹುಡುಕಿ ತಂದಿದ್ದಾರೆ. ಈ ಇಬ್ಬರು ಮಹನೀಯರುಗಳಿಗೂ ನಮ್ಮ ಕೃತಜ್ಞತೆಗಳು.


ಇನ್ನೂ ದೊರಕಬೇಕಾದ ಸಂಚಿಕೆಗಳ ವಿವರ ಇಂತಿದೆ.

ಕೊರವಂಜಿ: ಮೇ ಮತ್ತು ಜುಲೈ 1950 ಹಾಗೂ ಜನವರಿ ಮತ್ತು ಮಾರ್ಚ್ 1951.

ಈ ನಾಲ್ಕು ಸಂಚಿಕೆಗಳು ಸಿಗುವಂತಾದರೆ ಕಾಲು ಶತಮಾನದ ಸಮಗ್ರ ಕೊರವಂಜಿಯ ಗಣಕೀಕರಿತ ಸಿ.ಡಿ.ಗಳನ್ನು ಸಹಕಾರವನ್ನು ಇಂದಿನ ಪೀಳಿಗೆಯ ಓದುಗರಿಗೆ ಮುಟ್ಟಿಸುವ ನಮ್ಮ ಆಶಯವನ್ನು ಆಗಗೊಳಿಸಬಹುದು. ತಮ್ಮೆಲ್ಲರ ಸಹಕಾರವನ್ನು ಬೇಡುವ,

ಶಿವಕುಮಾರ್

ಸಂಪಾದಕರು, ಅಪರಂಜಿ



ಚರ್ಚೆ ಮಾಡೋಕ್ಕೆ ನಾನು ಯಾವಾಗ್ಲೂ ಸಿದ್ಧ.

ವಿದ್ಯಮಾನಗಳು

- ಕು.ಕ.

ಹಿಂದೆ ಬಿಹಾರದಲ್ಲಾಯಿತು. ಮುಂದೆ ಜಾರ್ಖಂಡಿನಲ್ಲಾಯಿತು. ಈಗ ಮತ್ತೆ ಮೇಘಾಲಯದಲ್ಲೂ ಅದೇ ಹಳೇ ನಾಟಕ. ವಿಧಾನಸಭೆಗೆ ಚುನಾವಣೆ ನಡೆಯುತ್ತದೆ. ಬಹುಮತ ಗಳಿಸಲು ವಿಫಲವಾದ ಪಕ್ಷದಿಂದ ರಾತ್ರೋರಾತ್ರಿ ಅಧಿಕಾರದ ಕಬ್ಜ. ಈ ಅಕ್ರಮ ಪ್ರವೇಶಕ್ಕೆ ಕಾನೂನು ಎತ್ತಿಹಿಡಿಯಬೇಕಾದ ರಾಜ್ಯಪಾಲರ ಖುಲ್ಲಂಖುಲ್ಲಾ ಬೆಂಬಲ. ಮುಖ್ಯಮಂತ್ರಿ ಕುರ್ಚಿಯನ್ನು ಲಪಟಾಯಿಸಿದವರಿಂದ ಕುದುರೆ ವ್ಯಾಪಾರ. ಈ ಕುದುರೆ ವ್ಯಾಪಾರ ಕುದುರದಿದ್ದಾಗ ರಾಜೀನಾಮೆ. ಮೇಘಾಲಯದಲ್ಲಿ ಮೊನ್ನೆಮೊನ್ನೆ ಇದೇ ನಾಟಕದ ಪುನರಾವರ್ತನೆಯಾಯಿತು. ಕಾಂಗ್ರೆಸ್ ಪಕ್ಷದ ಲಪಾಂಗ್ ಅಧಿಕಾರ ಲಪಟಾಯಿಸುವಲ್ಲಿ ಕಾಂಗ್ರೆಸ್ ಪಕ್ಷ ನೇಮಿಸಿದ ರಾಜ್ಯಪಾಲರ ವರದಹಸ್ತ. ಆದರೆ ಬೇದಷ್ಟು ಎಂಎಲ್‌ಎಗಳನ್ನು ಕೊಳ್ಳಲು ಸಾಧ್ಯವಾಗಲಿಲ್ಲ. ಒಂದೇ ವಾರದಲ್ಲಿ ಸಿಎಂ ರಾಜೀನಾಮೆ ಕೊಡಬೇಕಾಯಿತು. ಈಗ ಪವಾರ್ - ಸಂಗ್ಮಾರವರ ಎನ್‌ಸಿಪಿ ಬೆಂಬಲ ಪಡೆದ ಡೊಂಕುಪರ್ ಹೊಸ ಮುಖ್ಯಮಂತ್ರಿ. ತ್ಯಾಗಮಯಿ ಇತ್ಯಾದಿ ಬಿರುದಾಂಕಿತ ಕಾಂಗ್ರೆಸ್ ಅಧ್ಯಕ್ಷಿಣಿಗೆ ಮುಜುಗರ ಆಗಬೇಕು. ಆದರೆ ರಾಜಕಾರಣಿಗಳದು ದಪ್ಪ ಚರ್ಮ. ಮುಖಾಡೆ ಬಿದ್ದರೂ ಅವರ ಮೀಸೆ ಮಣ್ಣಾಗುವುದಿಲ್ಲ.

★★★

ಜುಲೈನಲ್ಲಿಯೇ ಆಗುತ್ತದೆಯೋ ಅಥವ ನವಂಬರ್‌ವರೆಗೂ ಕಾಯಬೇಕೋ ಎನ್ನುವ ಮೀನಾಮೇಷಗಳಿಗೆ ಕೊನೆಗೂ ತೆರೆ ಬಿದ್ದಿದೆ. ಚುನಾವಣಾ ಕಮೀಷನ್ ಇಬ್ಬರು ಪರ ಒಬ್ಬರು ವಿರೋಧದಲ್ಲಿ ಕರ್ನಾಟಕದಲ್ಲಿ ಜುಲೈನಲ್ಲಿಯೇ ಚುನಾವಣೆ ಎನ್ನುವ ನಿರ್ಣಯ ತೆಗೆದುಕೊಂಡಿದೆ. ಚುನಾವಣೆ ಈಗ ಬಿಲಕುಲ್ ಕೂಡದು, ಇದಕ್ಕೇನು ಅವಸರ ಮುಂದಿನ ವರ್ಷ ಯಾವಾಗಲಾದರೂ ಮಾಡಿದರಾಯಿತು ಎಂದು ಮುಂತಾಗಿ ವಾದಿಸುತ್ತಿದ್ದ ಪಕ್ಷಕ್ಕೆ ನಿರಾಶೆಯಾಗಿರಬೇಕು. ಆದರೆ ಇಲ್ಲೂ ಒಂದು ಅನುಕೂಲವಿದೆ. ಒಂದುಪಕ್ಷ ಕಾಂಗ್ರೆಸ್ ಸೋತರೆ, ಸೋಲಿಗೆ ಕೃಷ್ಣ ಖರ್ಗೆ ಯಾರೂ ಕಾರಣರಲ್ಲ ಚುನಾವಣಾ ಕಮೀಷನ್ನೇ ವಿಲನ್ ಎಂದು ಬೆಟ್ಟು ತೋರಿಸಬಹುದು!

★★★

ಮೇ ಚುನಾವಣೆಯಲ್ಲಿ ಗೆಲ್ಲುವವರಾರು? ಬೆಂಗಳೂರಿನಲ್ಲಿ ಅತಿ ದೊಡ್ಡ ಟ್ರಾಫಿಕ್ ಜ್ಯಾಂ ಮಾಡಿದವರೇ ಚುನಾವಣೆ ಗೆಲ್ಲುತ್ತಾರೆ ಎಂದು ರಾಜಕೀಯ ಪಕ್ಷಗಳು ನಿರ್ಧರಿಸಿರುವಂತಿದೆ. ಇಂತಹ ಜ್ಯಾಂಗಳನ್ನು ಏರ್ಪಡಿಸುವುದರಲ್ಲಿ ಪಕ್ಷಗಳ ನಡುವೆ ತೀವ್ರ ಪೈಪೋಟಿ. ಜೆಡಿಎಸ್ ತನ್ನ ಜೈತ್ರಯಾತ್ರೆಯ ಮೊದಲದಿನ ಬೆಂಗಳೂರಿನ ಮೈಸೂರು ರಸ್ತೆಯ ಗಾಳಿ ಆಂಜನೇಯ ದೇವಸ್ಥಾನದಿಂದ ಮದ್ದೂರಿನವರೆಗೂ 80 ಕಿಲೋಮೀಟರ್ ಉದ್ದಕ್ಕೂ ಟ್ರಾಫಿಕ್ ನಿಲ್ಲಿಸಿ 20

ಲಕ್ಷ ಜನರಿಗೆ ತೊಂದರೆ ಮಾಡಿದ್ದರೆ ಇದನ್ನು ಮೀರಿಸುವಂತೆ ಮಾರನೆಯ ದಿನವೇ ಬಿಜೆಪಿ ಅರ್ಧ ಬೆಂಗಳೂರಿನ ವಾಹನಗಳು ಗಂಟೆಗಟ್ಟಲೇ ಇದ್ದಲ್ಲೇ ಇರುವಂತೆ ಮಾಡಿ 25 ಲಕ್ಷ ಜನರ ಶಾಪ ಪಡೆದಿದೆ. ಅದರ ಮುಂದಿನ ದಿನ ಕಾಂಗ್ರೆಸ್ ಸರದಿಯಿತ್ತು. ಆದರೆ ಆ ಪಕ್ಷದವರಲ್ಲಿಯೇ ಇರುವ ಭಿನ್ನಾಭಿಪ್ರಾಯಗಳಿಂದ ಎಸ್.ಎಂ. ಕೃಷ್ಣ ಸ್ವಾಗತಕ್ಕಾಗಿ ಕೇವಲ ಅರ್ಧ ಗಂಟೆ ಟ್ರಾಫಿಕ್ ಜ್ಯಾಂನಲ್ಲಿಯೇ ತೃಪ್ತಿಪಡೆಯಬೇಕಾಯಿತಂತೆ. ಚುನಾವಣೆ 60 ದಿವಸ ಇರುವಾಗಲೇ ಈ ಸ್ಥಿತಿಯಾದರೆ ಚುನಾವಣೆ ಹತ್ತಿರ ಬಂದಾಗ ಹೇಗಿರುತ್ತದೆ ನೀವೇ ಊಹಿಸಿ.

★★★

ಏಕೋ ಏನೋ ನಮಗೂ ಅರವತ್ತು ಸಾವಿರಕ್ಕೂ ಪೂರ್ವಕಾಲದಿಂದ ಬಂದಿರುವ ನಂಟು. ಭಗವಾನ್ ಶ್ರೀಕೃಷ್ಣನ ಪತ್ನಿಯರ ಸಂಖ್ಯೆ 60000 ಎಂದು ಪುರಾಣಗಳಲ್ಲಿ ಬರೆದಿದೆಯಂತೆ. ಈಗ ನಮ್ಮ ಪಳನಿಯಪ್ಪನ್ ಚಿದಂಬರಂ ಅತಿಚಿಕ್ಕ, ಚಿಕ್ಕ, ಮಧ್ಯಮ ಪ್ರಮಾಣದ ರೈತರುಗಳ 60000 ಕೋಟಿ ರೂಪಾಯಿಗಳ, ಒಂದು ಚೂರು ಹೆಚ್ಚಿಲ್ಲ ಚೂರು ಕಡಿಮೆಯಿಲ್ಲ ಬರಾಬ್ಬರಿ 60000 ಕೋಟಿ ರೂಪಾಯಿಗಳ ಸಾಲ ಮನ್ನಾ ಮಾಡಿ ಸೂಪರ್ ಪಿಎಂ ಸೋನಿಯಾ ನಾಮಕಾವಸ್ತೆ ಪಿಎಂ ಮಮೋಸಿಂಗ್ ಮುಂತಾದವರಿಂದ ಶಹಬ್ಬಾಸ್ ಪಡೆದು ಸಂತೋಷದಿಂದ ಬೀಗುತ್ತಿದ್ದಾರೆ. ಕೊಟ್ಟೋನು ಕೋಡಂಗಿ ಇಸ್ಕೊಂಡೋನು ಈರಭದ್ರ ಎನ್ನುವುದು ನೂರಾರು ವರ್ಷಗಳ ಅನುಭವದಿಂದ ಬಂದ ಮಾತು. ನಮ್ಮ ಸರ್ಕಾರಿ ಬ್ಯಾಂಕುಗಳನ್ನು ಕೋಡಂಗಿಗಳನ್ನಾಗಿ ಮಾಡಿದವರಲ್ಲಿ ಪಳನಿಯಪ್ಪನ್ ಮೊದಲಲ್ಲ. ಆ ವಿಚಾರದಲ್ಲಿ ನಮ್ಮ ಪೂಜಾರಪ್ಪ ಈಗಾಗಲೇ ಪೇಟೆಂಟ್ ಪಡೆದಿದ್ದಾರೆ. ಈ ಮಹಾಕಾರ್ಯದಿಂದ ಕಾಂಗ್ರೆಸ್ ಪಕ್ಷಕ್ಕೆ ಲಾಭವಾಗುತ್ತಿರುವುದರಿಂದ ವಿರೋಧಿಗಳಿಗೆ ಕಸಿವಿಸಿ. ನಮ್ಮ ಮಣ್ಣಿನ ಮಗನ ಕುಮಾರ ಕುಮಾರಣ್ಣ ಈ 60000 ಕೋಟಿ ದಕ್ಕಿಸಿಕೊಂಡವರಲ್ಲಿ ಕನ್ನಡಿಗರು ಎಷ್ಟುಮಂದಿ ಅವರಿಗೆ ದಕ್ಕಿದ್ದೆಷ್ಟು ಎಂದು ಕೇಳುತ್ತಿದ್ದಾರೆ.

★★★

ಹಿಂದಿನ ಇಂದಿನ ಮುಂದಿನ ರಾಜಕಾರಣಿಗಳಲ್ಲಿ, ಈಗಾಗಲೇ ಪಿಂಚಣಿ ಪಡೆದಿರುವ, ಇನ್ನೂ ಸಂಬಳ ತೆಗೆದುಕೊಳ್ಳುತ್ತಿರುವ ಮಾಜಿ ಹಾಲಿ ಅಧಿಕಾರಿಗಳಲ್ಲಿ ತಲ್ಲಣ ಮೂಡಿಸಿದ್ದ ಒಂದು ಬೆಳವಣಿಗೆ ಈಗ ಸುಖಾಂತ್ಯ ಕಂಡಿದೆ. ದೇವನಹಳ್ಳಿಯಲ್ಲಿ ಅದೆಷ್ಟೋ ಸಾವಿರ ಕೋಟಿ ರೂಪಾಯಿಗಳ ಖರ್ಚಿನಲ್ಲಿ ಕಟ್ಟುತ್ತಿರುವ ಬೆಂಗಳೂರು ಇಂಟರ್ ನ್ಯಾಷನಲ್ ಏರ್‌ಪೋರ್ಟ್ ಮೊದಲೇ ನಿಗದಿಯಾಗಿದ್ದಂತೆ ಮಾರ್ಚಿ 30ನೇ ತಾರೀಕೇ ಪ್ರಾರಂಭವಾಗುತ್ತದೆ ಎನ್ನುವ ಸುದ್ದಿ ಮೇಲೇ ಹೇಳಿದ ಮಂದಿಗಳಲ್ಲಿ ತೀವ್ರ ಆತಂಕ ಮೂಡಿಸಿತ್ತಂತೆ. ಪಾಪ ಈ ಜನ 60 ವರ್ಷಗಳ ಕಠಿಣ ಶ್ರಮದಿಂದ ಯಾವುದೇ ಪ್ರಾಜೆಕ್ಟನ್ನು ನಿಗದಿತ ಸಮಯದಲ್ಲಿ ಮುಗಿಸಲು ಸಾಧ್ಯವೇ ಇಲ್ಲ ಎಂದು ಮತ್ತೆಮತ್ತೆ ತೋರಿಸುತ್ತಿದ್ದರು. ಈಗ ಯಾರೋ ಒಬ್ಬ ತಲೆಮಾಸಿದವನು ಬಂದು ಇವರುಗಳು ಸ್ಥಾಪಿಸಿದ್ದ ಸುವರ್ಣ ಸಂಪ್ರದಾಯವನ್ನು ಮುರಿದರೆ ಇವರಿಗೆ ಆತಂಕವಾಗದೇ ಇರುತ್ತದೆಯೇ? ಈಗ ಏರ್‌ಪೋರ್ಟ್ ಪ್ರಾರಂಭದ ದಿನ ಮುಂದೆ ಹೋಗಿದೆ. ಹಿಂದಿನ ಸಂಪ್ರದಾಯ ಉಳಿದುಕೊಂಡಿದೆ. ಈ ಜನರ ಮುಂದಿದ್ದ ಕರಿಮೋಡಗಳೆಲ್ಲಾ ಚೆದುರಿವೆ.

★★★

ಮರುಕಟ್ಟು.....

ಬೈಸಿಕಲ್ ಥೀವ್ಸ್......!

- ಎಚ್. ಗೋಪಾಲಕೃಷ್ಣ

ಹೈಸ್ಕೂಲು ಓದುತ್ತಿರಬೇಕಾದರೆ ಮನೇಲಿ ಚಿಕ್ಕವನಾಗಿದ್ದ ನನ್ನನ್ನು ಚಿಕ್ಕ ಪುಟ್ಟ ಸಾಮಾನು ತರಲು ನಮ್ಮಮ್ಮ ಕಳಿಸುತ್ತಿದ್ದರು. ಆಗ ತಾನೇ ಒಂದು ಸೆಕೆಂಡ್ ಹ್ಯಾಂಡ್ ಸೈಕಲ್ಲನ್ನ ನಮ್ಮ ಅಣ್ಣನಿಗೆ ಅಂತ ತಂದಿದ್ದರು. ಅಂಗಡೀಗೆ ಹೋಗಬೇಕು ಅಂದಕೂಡಲೇ ಸೈಕಲ್ಲು ತಗೊಳ್ಳೋದೂ ಭರ್ ಅಂತ ಅಂಗಡೀಗೆ ಹೋಗೋದೂ ಮಾಡುತ್ತಿದ್ದೆ. ಲೈಟ್ ಬಿಲ್ಲು ಕಟ್ಟಿ ಬಾರೋ ಅಂತ ಅಮ್ಮ ಒಂದುಸಲ ಹೇಳಿದರು. ಲೈಟ್ ಬಿಲ್ಲು ಅಂದರೆ ಗೊತ್ತಲ್ಲಾ ವಿದ್ಯುತ್ ಬಿಲ್ಲಿಗೆ ಲೈಟ್ ಬಿಲ್ಲು ಅಂತ ಪರ್ಯಾಯ ! ಸೈಕಲ್ಲು ತಗೊಂಡೆ ಲೈಟ್ ಬಿಲ್ಲು ಕಟ್ಟಲು ಹೋದೆ. ಕರೆಂಟ್ ಆಫೀಸಿನ ಮುಂದೆ ಸೈಕಲ್ಲು ನಿಲ್ಲಿಸಿ ಬೀಗ ಹಾಕಿ ಹೋಗಿ ಕ್ಯೂ ನಲ್ಲಿ ನಿಂತೆ. ಹಣ ಕಟ್ಟಿ ಆಚೆ ಬಂದರೆ ನನ್ನ ಸೈಕಲ್ಲು ಪತ್ತೆ ಇಲ್ಲವೇ ! ಮನೇಗೆ ಹೋದ ಕೂಡಲೇ ಅಮ್ಮ ಅಣ್ಣ ಅಪ್ಪ ಎಲ್ಲರೂ ಹೇಗೆ ಬೈಯಬಹುದು ಅಂತ ನೆನೆಸಿಕೊಂಡು ಮುಖ ಪೆಚ್ಚಾಯಿತು. ಲೈಟ್ ಬಿಲ್ಲು ಕಟ್ಟಕ್ಕೆ ಅಂತ ಅದೇ ಹೊತ್ತಿಗೆ ನಮ್ಮ ಎರಡು ರಸ್ತೆ ಆಚೆಯ ವೆಂಕಟಾಚಲಯ್ಯ ಬಂದರು. ಇವರು ಎಚ್.ಎಂ.ಟಿ. ಯಲ್ಲಿ ಸೆಕ್ಯೂರಿಟಿನಲ್ಲಿ ಇದ್ದರು.

ಏಕೋ ಪೆಚ್ಚಗಿದ್ದೀ? ಏನಾಯಿತು? ಅಂತ ಕೊಂಚ ಜರ್ಬಿನಲ್ಲೇ ಕೇಳಿದರು.

ಸೈಕಲ್ಲು ಇಲ್ಲಿ ನಿಲ್ಲಿಸಿ ಬಿಲ್ ಕಟ್ಟೋಕ್ಕೆ ಅಂತ ಹೋಗಿದ್ದೆ. ಆಚೆ ಬಂದರೆ ಸೈಕಲ್ಲು ಇಲ್ಲ.... ಅಂದೆ. ಕಣ್ಣಿನಲ್ಲಿ ಒಂದು ಹನಿ ನೀರು ಬಂದಿತ್ತೇನೋ.

ಬೀಗ ಹಾಕಿದ್ದೆಯಾ

ಹೂಂ ನೋಡಿ ಕೀ ಇಲ್ಲೇ ಇದೆ ಅಂತ ಜೇಬಿನಿಂದ ಕೀ ತೆಗೆದು ತೋರಿಸಿದೆ.

ನಮ್ಮ ಹಳೇ ಸೈಕಲ್ಲು ಅವರೂ ನೋಡಿದ್ದರು. ಒಂದು ನಿಮಿಷ ಚಿಂತಿಸಿದರು. ಪೊಲೀಸ್ ಸ್ಟೇಷನ್ನಿಗೆ ಕಂಪ್ಲೈಂಟು ಕೊಟ್ಟರೂ ಸೈಕಲ್ಲು ಸಿಗಲ್ಲವೇ ಅಂತ ಗೊಣಗಿಕೊಂಡರು.

ಏನೋ ಯೋಚನೆ ಮಾಡಿ ಸರಿ ನೀನು ಮನೇಗೆ ಹೋಗು ಅಂದರು!

ಸೈಕಲ್ಲು? ಸೈಕಲ್ಲು ಕಳೆದು ಹೋಯಿತು ಅಂದರೆ ಮನೇಲಿ ಬೈತಾರೆ... ಅಂದೆ.

ಸೈಕಲ್ಲು ನಾನು ಇಸಗೊಂಡು ಹೋದೆ ಅಂತ ಹೇಳು...ಅಂದರು.

ಮನೇಗೆ ಬಂದೆ. ಸೈಕಲ್ಲು ವೆಂಕಟಾಚಲಯ್ಯ ಇಸಕೊಂಡು ಹೋದರು ಅಂತ ಹೇಳಲಿಲ್ಲ.

ಲೈಟ್ ಬಿಲ್ಲು ಕಟ್ಟೋಕ್ಕೆ ಆಫೀಸಿನ ಒಳಗಡೆ ಹೋದೆ. ಹೊರಗೆ ಬರೋ ಅಷ್ಟರಲ್ಲಿ ಯಾರೋ ಸೈಕಲ್ಲು ತಗೊಂಡು ಹೋಗಿಬಿಟ್ಟಿದ್ದರು ಅಂತ ಅಳು ಮುಖ ಮಾಡಿದೆ.

ಅಳು ಮುಖ ನೋಡಿ ಕನಿಕರ ಹುಟ್ಟಿತ್ತೋ ಏನೋ ಜಾಸ್ತಿ ಬೈಯಲಿಲ್ಲ, ಬೇರೆ ಸೈಕಲ್ಲು ಎಲ್ಲಿ ಹುಡುಕಬೇಕು ಅಂತ ಯೋಚನೆ ಮಾಡಿದರು.

ಹಾಗೇ ಪೊಲೀಸ್ ಸ್ಟೇಷನ್ನಿಗೆ ಒಂದು ಕಂಪ್ಲೈಂಟು ಕೊಡು ಅಂತ ದೊಡ್ಡಣ್ಣನಿಗೆ ನಮ್ಮಪ್ಪ ಸೂಚನೆ ನೀಡಿದರು.

ಉಂಡು ಊಟ ಮಾಡಿ ಅಪ್ಪ ಆಫೀಸಿಗೆ ಹೊರಡಬೇಕು, ಅಷ್ಟರಲ್ಲಿ ವೆಂಕಟಾಚಲಯ್ಯ ಮನೆಗೆ ಬಂದರು. ಅವರ ಹತ್ತಿರ ಮತ್ತೊಂದು ಸೈಕಲ್ಲು.

ನಮ್ಮ ಸೈಕಲ್ಲು ನನ್ನ ಮಗ ಹೀಗೆ ಲೈಟ್ ಬಿಲ್ಲು ಕಟ್ಟೋಕ್ಕೆ ಅಂತ ಹೋಗಿದ್ದೋನು ಕಳೆದುಕೊಂಡು ಬಂದ ಅಂತ ನಮ್ಮಪ್ಪ ಹೇಳೋಕ್ಕೆ ಮೊದಲೇನೇ ವೆಂಕಟಾಚಲಯ್ಯ ನಮ್ಮ ತಂದೆಗೆ ನಮಸ್ಕಾರ ಅಂದರು.

ದಾರೀಲಿ ಗೋಪಿ ಹತ್ತಿರ ಸೈಕಲ್ಲನ್ನ ಕೇಳಿ ಇಸ್ಕೊಂಡೆ-ಲೈಟ್ ಬಿಲ್ಲು ಕಟ್ಟಬೇಕಿತ್ತು. ಲೈಟ್ ಬಿಲ್ಲು ಕಟ್ಟುಕ್ಕೆ ಅಂತ ಒಳಗೆ ಹೋಗೀದೀನಿ ಆಚೆ ಬರೋಷ್ಟರಲ್ಲಿ ಅದು ಯಾವನೋ ಸೈಕಲ್ಲು ಕದ್ದುಕೊಂಡು ಹೋಗಿಬಿಟ್ಟಿದಾನೆ... ಅಂತ ಒಂದು ಸೆಕೆಂಡು ಮಾತು ನಿಲ್ಲಿಸಿದರು.

ನಮ್ಮ ಅಪ್ಪ,ಅಮ್ಮ,ಅಣ್ಣ ಎಲ್ಲರೂ ಕಕ್ಕಾಬಿಕ್ಕಿ ! ನನ್ನ ಮುಖ ನೋಡ್ತಾರೆ ಅವರ ಮುಖ ನೋಡ್ತಿದಾರೆ.

ವೆಂಕಟಾಚಲಯ್ಯನವರಿಗೆ ಇದು ತಿಳೀಲಿಲ್ಲ.

ಅದಕ್ಕೇ ನಾನೇನು ಮಾಡಿಬಿಟ್ಟೆ ಗೊತ್ತಾ? ಅದೇ ತರಹದ್ದು ಇನ್ನೊಂದು ಸೈಕಲ್ಲು ಅಲ್ಲೇ ಯಾರೋ ಬಿಟ್ಟುಬಿಟ್ಟು ಹೋಗಿದ್ದರು. ಅದನ್ನ ತಂದುಬಿಟ್ಟಿದೀನಿ-ಇದನ್ನೇ ಉಪಯೋಗಿಸಿಕೊಳ್ಳೋ ಮರೀ......

ವೆಂಕಟಾಚಲಯ್ಯನವರು ಹೀಗೆ ಹೇಳಿದ ಕೂಡಲೇ ಅಪ್ಪ ಅಮ್ಮ ಅವರಿಗೆ ಕ್ರಾಸ್ ಪ್ರಶ್ನೆಗಳ ಸುರಿಮಳೆ ಕರೆದು ಏನಾಯಿತು ಸೈಕಲ್ಲಿಗೆ ಅಂತ ನಿಜವನ್ನ ಅವರ ಬಾಯಿಂದ ಹೊರಡಿಸಿಬಿಟ್ಟರು. ಕೊಂಚ ಸಮಾಧಾನದ ನಂತರ ಮಾತು ಮುಂದುವರೀತು.

ಅಲ್ಲಯ್ಯಾ ಈಗ ನೀನು ತಂದಿರೋ ಸೈಕಲ್ಲಿನವನು ಪೊಲೀಸ್ ಕಂಪ್ಲೈಂಟು ಕೊಟ್ಟು ಅವರು ಬಂದು ನಮ್ಮನ್ನ ಹಿಡಕೊಂಡರೆ....?

ಹಾಗೇನೂ ಆಗೋಲ್ಲ, ಸೈಕಲ್ಲಿನ ನಂಬರು ಅಳಿಸಿದೀನಿ,ಇದನ್ನ ಮಾರಿದೀನಿ ಅಂತ ಒಂದು ರಸೀತಿ ಬೇಕಾದರೆ ನಾನೇ ನಿಮಗೆ ಬರೆದು ಕೊಡ್ತೀನೀ....

ಪಾಪ ಭೀರುಗಳು ಅದಕ್ಕಿಂತ ಹೆಚ್ಚಾಗಿ ಪುಕ್ಕಲುಗಳು- ಇಲ್ಲ ಬೇಡಾ ಆ ಸೈಕಲ್ಲು ನಮಗೆ ಪಾಪ ಅದ್ಯಾವ ಬಡವನದ್ದೋ ಅದನ್ನ ನಾವು ತಗೊಂಡು ಬಂದು ಉಪಯೋಗಿಸಿ ಅವನ ಹೊಟ್ಟೆ ಯಾಕೆ ಉರಿಸಬೇಕೂ....? ಅಂತ ಆಗಲೇ ನಿರ್ಧಾರವನ್ನೂ ತಗೊಂಡುಬಿಟ್ಟೆವು. ವೆಂಕಟಾಚಲಯ್ಯ ಆಮೇಲೆ ಹೋಗಿ ಯಾರಿಗೂ ಕಾಣದ ಹಾಗೆ -ಮುಖ್ಯವಾಗಿ ಪೊಲೀಸರ ಕಣ್ಣಿಗೆ ಬೀಳದ ಹಾಗೆ - ಸೈಕಲ್ಲನ್ನ ಲೈಟ್ ಬಿಲ್ಲಿನ ಆಫೀಸಿನ ಮುಂದೆ ಬಿಟ್ಟು ಬರೋದೂ ಅಂತಲೂ ನಮ್ಮಪ್ಪ ಐಡಿಯಾ ಕೊಟ್ಟರು. ಹಾಗೇ ಐಡಿಯಾನ ಪಾಲಿಸಿ ಸೈಕಲ್ಲನ್ನ ಆಫೀಸಿನ ಹತ್ತಿರ ಬಿಟ್ಟುಬಂದೆ ಅಂತ ಒಂದೆರೆಡು ದಿವಸ ಆದಮೇಲೆ ವೆಂಕಟಾಚಲಯ್ಯ ಹೇಳಿದ್ದೂ ನೆನಪು...


ಈಗ ಇಷ್ಟೊಂದು ವರ್ಷ-ಸುಮಾರು ಮೂವತ್ತೋ ನಲವತ್ತೋ ವರ್ಷ- ಆದಮೇಲೆ ಈ ನೆನಪು ಮೊನ್ನೆ ಯಾಕೋ ನುಗ್ಗಿ ಬಂತು. ಏನು ಕಾರಣ ಈ ನೆನಪು ನುಗ್ಗೋದಿಕ್ಕೆ ಅಂತ ತಲೆಕೆಡಿಸಿಕೊಂಡೆ. ಮಗು ಸೈಕಲ್ಲು ಕಳೆದುಕೊಂಡಿದೆ, ಮನೇಗೆ ಹೋಗಿ ಅದು

ಬೈಯಿಸಿಕೊಳ್ಳೋದು ಬೇಡ-ಅದರ ಬದಲಿಗೆ ಒಂದು ಸೈಕಲ್ಲು ಕದ್ದಾದರೂ ರಿಪ್ಲೇಸ್ ಮಾಡಿದರೆ ಆಯಿತು ಅಂತ ಯೋಚಿಸಿದ ವೆಂಕಟಾಚಲಯ್ಯ ಅವರ ಬಿಂಬ ನಿಲ್ಲುತ್ತೆ.

ನಮ್ಮ ಮನೆಯವರು ಪುಕ್ಕಲುಗಳು ಅಂದೆ, ಪಾಪ ಭೀರುಗಳು ಅಂದೆ. ಇಷ್ಟು ವರ್ಷದ ನಂತರ ನಮ್ಮ ಅಪ್ಪ ಅಮ್ಮನ ಜೀವನದ ಶೈಲಿಯನ್ನ ನೋಡಿದ್ದ ನಂತರ ನನಗೆ ಅವರಲ್ಲಿ ಪುಕ್ಕಲತನಕ್ಕಿಂತಲೂ ಹೆಚ್ಚಾಗಿ ನಮಗೆ ಸೇರಿಲ್ಲದೇ ಇರೋದನ್ನ ನಾವು ಇಟ್ಕೋಬಾರದು, ಅದೂ ಬೇರೆಯವರಿಗೆ ತೊಂದರೆ ಕೊಟ್ಟು ಎನ್ನುವ ಮನೋಭಿಲಾಶೆ ನನಗೆ ತೋರುತ್ತಿದೆ.

ಈ ಘಟನೆ ನಡೆದು ಅದೆಷ್ಟೋ ವರ್ಷಗಳ ನಂತರ ನಾನು ವಿಟ್ಟೋರಿಯೊ ಡಿಸಿಕಾನ ಬೈಸಿಕಲ್ ಥೀವ್ಸ್ ಎನ್ನುವ ಸಿನಿಮಾ ನೋಡಿದ್ದು. ಬೈಸಿಕಲ್ಲು ಇದೆ ಎನ್ನುವ ಕಾರಣಕ್ಕೆ ಕಥಾನಾಯಕನಿಗೆ ಕೆಲಸ ಸಿಗುವುದೇ ಅತಿ ಕಷ್ಟ ಎನಿಸಿದ ಯುದ್ಧಾ ನಂತರದ ದಿನದಲ್ಲಿ ಒಂದು ಕೆಲಸ ಅಂತ ಸಿಗುತ್ತೆ. ಪೋಸ್ಟರುಗಳನ್ನು ಹೊತ್ತು ಅದನ್ನು ಗೋಡೆಗಳ ಮೇಲೆ ಅಂಟಿಸುವ ಕೆಲಸ ಅದು. ತಂದೆ ಪುಟ್ಟ ಮಗ ಸೈಕಲ್ಲಿನ ಮೇಲೆ ಪೋಸ್ಟರುಗಳನ್ನು ಇಟ್ಟುಕೊಂಡು ಹೊರಡುತ್ತಾರೆ ಗೋಡೆಮೇಲೆ ಅದನ್ನು ಅಂಟಿಸುವಾಗ್ಗೆ ಬೈಸಿಕಲ್ ಕಳುವಾಗುತ್ತದೆ. ಅದನ್ನು ಹುಡುಕುವ ಮತ್ತು ಸೈಕಲ್ಲು ಇಲ್ಲವಾದ್ದರಿಂದ ಅವರು ಪಡುವ ಪಾಡೇ ಚಿತ್ರಕ್ಕೆ ಪ್ರೇರಣೆ. ಕ್ಲಾಸಿಕ್ ಸಿನಿಮಾ ಎಂಬ ಹೆಸರು ಈ ಚಿತ್ರಕ್ಕೆ , ಯಾವುದೇ ಫಿಲ್ಮ್ ಅಪ್ರಿಷಿಯೇಷನ್ ಕೋರ್ಸುಗಳಲ್ಲೂ ಈ ಸಿನಿಮಾದ ಹೆಸರು ಇಲ್ಲದೇ ತರಗತಿ ಮುಂದುವರೆಯದು..

ವೆಂಕಟಾಚಲಯ್ಯ ಆಗಲೀ ನಮ್ಮ ಮನೆಯ ಯಾರೇ ಆಗಲೀ ಬೈಸಿಕಲ್ ಥೀವ್ಸ್ ಸಿನಿಮಾ ನೋಡಿದವರಲ್ಲ. ಆದರೂ ಮಾನವೀಯ ಭಾವನೆಗಳು ರಾಷ್ಟ್ರ , ಬೌದ್ಧಿಕತೆ ಮತ್ತು ಭಾಷೆಯ ಎಲ್ಲೆಗಳನ್ನೂ ಮೀರಿ ಹೇಗೆ ಸಮಾನಾಂತರವಾಗಿ ಹರಿಯುತ್ತದೆ ಎಂದು ಯೋಚಿಸಿದಾಗ ಸಾಮಾಜಿಕ ಸಮಸ್ಯೆಗಳು ಹೆಚ್ಚೂ ಕಡಿಮೆ ಒಂದೇಸ್ಥರದಲ್ಲಿರುತ್ತವೆ ಅನಿಸುತ್ತದೆ ! ಅಲ್ಲವಾ?



Not for nothing are we considered

"One of the most preferred B-Schools...."!

Our enviable reputation as "One of the most preferred B-Schools in Bangalore", the Silicon Valley of India, has been a result of our strategic approach in imparting Management Studies. The distinct difference lies in our emphasis on the holistic development of the students while preparing them as Managers of tomorrow upholding Bharatiya Vidya Bhavan's values.

Two-year Full Time Master of Business Administration (MBA) Course

Our student-centric facilities include:

Aesthetically designed Classrooms with LCD & NET

Highly qualified Faculty with Doctorate & Industry experience



- *Corporate ambience*
- *24-hours broadband Internet facility*
- *Extensive orientation programme*
- *Communication Skills*
- *Holistic approach through Yoga & Meditation*

M. P. BIRLA INSTITUTE OF MANAGEMENT

Associate Bharatiya Vidya Bhavan

Approved by AICTE and affiliated to Bangalore University

We are a BHAVAN'S INSTITUTE

43, Race Course Road, Bangalore-560 001.
Ph: 080-22354275, 22382798, 22389634, 22207742, Fax: 080-22389635
E-mail: admission@mpbim.com, Website: www.mpbim.com

"Let noble thoughts come to us from every side" - Rig Veda

Mailing Date
5th of every month
Mailed at: Rajajinagar - PO

CPMG/KA/BGW-544/2006-2008
RNI-KAR-KAN / 2005 / 15457

Printed by: V.R. NATH for the Publisher KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore - 560 003.
Printed at: Ravi Graphics, 53/8, 2nd Main Road, Industrial Town, Rajajinagar, Bangalore - 560 010. Ph : 2330 5999.
Editor : M. SHIVAKUMAR